ಜನಮನದ ದನಿ

# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ

18 ಮಾರ್ಚ್ 2026 ಬುಧವಾರ ಬೆಲೆ ₹ 2.00 ಸಂಪುಟ : 20 ಸಂಚಿಕೆ : 8 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629



ಪಶ್ಚಿಮ ಏಷ್ಯಾದಲ್ಲಿ ಏರ್ಪಟ್ಟಿರುವ ಸಂಘರ್ಷದಿಂದಾಗಿ ಅಹಮದಾಬಾದ್‌ನ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್‌ನ (ಐಐಎಂಎ) ದುಬೈ ಕ್ಯಾಂಪಸ್‌ನ ಎಲ್ಲಾ 35 ವಿದ್ಯಾರ್ಥಿಗಳನ್ನು ಇಲ್ಲಿನ ಮುಖ್ಯ ಕ್ಯಾಂಪಸ್‌ಗೆ ಸ್ಥಳಾಂತರಿಸಲಾಗಿದೆ ಎಂದು ಐಐಎಂಎ ಮಂಗಳವಾರ ತಿಳಿಸಿದೆ.




ಮಕ್ಕಳಿರಲವ್ವ ಮನೆ ತುಂಬಾ ಎನ್ನುತ್ತಿರುವ ನ್ಯಾಯುಡ್ಡಗಾರು » 2



ಜೂನಿಯರ್ ಕಾಲೇಜು ಮೈದಾನಕ್ಕೆ ಸಂತೆ ಸ್ಥಳಾಂತರ » 3



ರೈಲ್ವೆ ಪರೀಕ್ಷೆ : ಕೇಂದ್ರದಿಂದ ಕನ್ನಡಿಗರಿಗೆ ಮತ್ತೆ ಅನ್ಯಾಯ » 4


# ಲಾಟರಿ ಮೂಲಕ ಮರಳು ಸಾಗಾಣೆ ಗುತ್ತಿಗೆ ವಿಲೇವಾರಿ

- ಹೇಮಾವತಿ ನದಿ ಪಾತ್ರದ 22 ಸ್ಥಳಗಳಲ್ಲಿ ಮರಳು ತೆಗೆಯಲು ಅವಕಾಶ
- ಕೇಂದ್ರ ಪರಿಸರ ಇಲಾಖೆಯ ಒಪ್ಪಿಗೆ ನಂತರವೇ ಮರಳು ಸಾಗಾಣೆಗೆ ಅನುಮತಿ
- ಮೊದಲ ಬಾರಿಗೆ ವಿಡಿಯೋ ರೆಕಾರ್ಡಿಂಗ್ ಮೂಲಕ ಹರಾಜು ಪ್ರಕ್ರಿಯೆ

• ಪ್ರಜೋದಯ ವರದಿ

**ಹಾಸನ :** ಜಿಲ್ಲೆಯ ಆಲೂರು, ಸಕಲೇಶಪುರ ಹಾಗು ಬೇಲೂರು ತಾಲ್ಲೂಕಿನ ಹೇಮಾವತಿ ನದಿ ಪಾತ್ರದ 22 ಸ್ಥಳಗಳಲ್ಲಿ ಐದು ವರ್ಷಗಳ ಅವಧಿಗೆ ಮರಳು ಸಾಗಾಣೆ ಗುತ್ತಿಗೆ ಟೆಂಡರ್ ಪ್ರಕ್ರಿಯೆಯು ಮೊದಲ ಬಾರಿಗೆ ಬಿಗಿ ಕ್ರಮ ಗಳೊಂದಿಗೆ ಅತ್ಯಂತ ಪಾರದರ್ಶಕವಾಗಿ ನಡೆಯಿತು.

ನಗರದ ಪ್ರವಾಸಿ ಮಂದಿರದಲ್ಲಿ ಮಂಗಳವಾರ ಬೆಳಿಗ್ಗೆ 11.30ಕ್ಕೆ ಪ್ರಾರಂಭ ಗೊಂಡ ಮರಳು ಕೇಂದ್ರ ಗುತ್ತಿಗೆ ವಿಲೇವಾರಿಯು ಎಲ್ಲಾ ಬಿಡ್‌ದಾರರು ಒಂದೇ ದರವನ್ನು ನಮೂದು ಮಾಡಿದ್ದರಿಂದ ಜಿಲ್ಲಾಧಿ ಕಾರಿಯವರ ಸಮ್ಮುಖದಲ್ಲಿ ಲಾಟರಿ ಮೂಲಕ ನೆರವೇರಿತು.

ಪ್ರತಿ ಬಾರಿ ಮರಳು ಹರಾಜು ಗುತ್ತಿಗೆ ಸಂದರ್ಭದಲ್ಲಿ ಲೋಪಗಳು ಉಂಟಾಗುತ್ತಿದ್ದ ಹಿನ್ನಲೆಯಲ್ಲಿ ಜಿಲ್ಲಾಧಿಕಾರಿಯವರು ಮರಳು ಗುತ್ತಿಗೆ ಪಡೆಯಲು ಇಎಂಡಿ ಪಾವತಿ ಮಾಡಿದ 78 ಮಂದಿಗೆ ಈ ಮೊದಲೇ ಐಡಿ ಕಾರ್ಡ್ ವಿತರಣೆಯ ವ್ಯವಸ್ಥೆ ಮಾಡಿದ್ದಲ್ಲದೆ, ಬಿಡ್ ದಾರರ ಹೊರತಾಗಿ ಬೇರೆಯವರಿಗೆ ಅವಕಾಶ ನೀಡಲಿಲ್ಲ. ಪೊಲೀಸ್ ಬಿಗಿ ಭದ್ರತೆಯೊಂದಿಗೆ ಬಿಡ್‌ದಾರರಿಗೆ ಮಾತ್ರ ಲಾಟರಿ ಪ್ರಕ್ರಿಯೆ ನಡೆದ ಕೊಠಡಿ ಪ್ರವೇಶಕ್ಕೆ ಅವಕಾಶ ನೀಡಲಾಗಿತ್ತು.

ಎಲ್ಲಾ ಬಿಡ್‌ದಾರರ ಸಮ್ಮತಿಯ ಪ್ರಕಾರ 22 ಮರಳು ಎತ್ತುವಳಿ ಕೇಂದ್ರಗಳ ಗುತ್ತಿಗೆ ಹರಾಜು



ನಿಗದಿಯನ್ನು ಶಾಲಾ ಬಾಲಕಿ ಯೊಬ್ಬಳಿಂದ ಲಾಟರಿ ಎತ್ತುವ ಮೂಲಕ ಬಿಡ್‌ದಾರರನ್ನು ಗೊತ್ತು ಪಡಿಸಲಾಯಿತು. ಪ್ರತಿ ಟನ್‌ಗೆ 850 ರೂ.ನಂತೆ ದರ ನಿಗದಿ ಪಡಿಸಲಾಗಿದ್ದು, ವಾರ್ಷಿಕ ಗಣಿ ಇಲಾಖೆ ನಿಗದಿ ಪಡಿಸುವ ಮೆಟ್ರಿಕ್ ಟನ್ ಆಧಾರದ ಮೇಲೆ ಬಿಡ್‌ದಾರರು ಆ ವರ್ಷದ ಸಂಪೂರ್ಣ ಹಣವನ್ನು ಮೊದಲೇ ಪಾವತಿ ಮಾಡ ಬೇಕಾಗುತ್ತದೆ.

ಪ್ರತಿ ಬಿಡ್‌ದಾರರಿಂದ ಪೂರ್ವಬಾವಿಯಾಗಿ ಪ್ರತಿ ಮರಳು ಎತ್ತುವಳಿ ಕೇಂದ್ರಕ್ಕೆ 15 ಲಕ್ಷ ರೂ.ನಂತೆ ಹಣ ಪಡೆಯಲಾಗಿದೆ. ಹರಾಜು ಪ್ರಕ್ರಿಯೆಯ ಎಲ್ಲಾ ನಡಾವಳಿಗಳನ್ನು ವಿಡಿಯೋ ಮೂಲಕ ಚಿತ್ರೀಕರಿಸಲಾಗಿದ್ದು, ಗೊಂದಲ ಹಾಗು ಪ್ರಭಾವಕ್ಕೆ ಅವಕಾಶ ಆಗದ ರೀತಿಯಲ್ಲಿ ಟೆಂಡರ್ ಪ್ರಕ್ರಿಯೆ ಪೂರ್ಣ ಗೊಳಿಸಲಾಗಿದೆ. ಆದರೆ, ಕೇಂದ್ರ ಪರಿಸರ ಇಲಾಖೆಯ ಅನುಮತಿ ದೊರೆತ ನಂತರವಷ್ಟೇ ಮರಳು ಎತ್ತುವಳಿ ಅವಕಾಶ ಸಿಗಲಿದ್ದು, ಈ ಬೇಸಿಗೆಯ ಅವಧಿಯಲ್ಲಿ ಮರಳು ತೆಗೆಯಲು ಅವಕಾಶ ಆಗಲಾರದೆಂಬ ಅಭಿಪ್ರಾಯ ಇದೆ.

ಜಿಲ್ಲಾಧಿಕಾರಿ ನೇತೃತ್ವದ ಸಮಿತಿಯು ನಡೆಸಿದ ಮರಳು ಗುತ್ತಿಗೆ ಹರಾಜು ಪ್ರಕ್ರಿಯೆಗೆ ಕೇಂದ್ರ ಪರಿಸರ ಇಲಾಖೆಯ ಒಪ್ಪಿಗೆ ಪಡೆದುಕೊಳ್ಳಲು ಎರಡ್ಮೂರು ತಿಂಗಳ ಅವಧಿ ತೆಗೆದುಕೊಳ್ಳುವುದರಿಂದ ಈ ಮಳೆಗಾಲಕ್ಕೂ ಮುನ್ನ ಮರಳು ಎತ್ತುವಳಿಗೆ ಸಿಗಲಾರದೆಂದು ಹೇಳಲಾಗುತ್ತಿದೆ.

ಮರಳು ಗುತ್ತಿಗೆ ಹರಾಜು ಪ್ರಕ್ರಿಯೆ ಸಭೆಯಲ್ಲಿ ಜಿಲ್ಲೆಯ ಗಣಿ ಮತ್ತು ಭೂ ವಿಜ್ಞಾನ ಇಲಾಖೆ, ಪ್ರಾದೇಶಿಕ ಸಾರಿಗೆ ಇಲಾಖೆ, ಹಾಸನ ಹಾಗು ಸಕಲೇಶಪುರ ಉಪವಿಭಾಗಾ ಧಿಕಾರಿಗಳು ಭಾಗಿಯಾಗಿದ್ದರು.

# ಶಾಸಕರಿಂದ ಸಂಪುಟ ಪುನರ್ ರಚನೆ ಬೇಡಿಕೆ

## 40ಕ್ಕೂ ಹೆಚ್ಚು ಶಾಸಕರಿಂದ ಮುಖ್ಯಮಂತ್ರಿ ಸಿದ್ದರಾಮಯ್ಯ ಭೇಟಿ

• ಪ್ರಜೋದಯ ವರದಿ

**ಬೆಂಗಳೂರು:** ರಾಜ್ಯದಲ್ಲಿ ಸಂಪುಟ ಪುನರ್ ರಚನೆ ಕೂಗು ಮತ್ತೆ ಜೋರಾಗಿದೆ. ಇತ್ತೀಚೆಗಷ್ಟೇ ಕೆಲವು ಹಿರಿಯ ಸಚಿವರು ನಗರದ ಖಾಸಗಿ ಹೋಟೆಲ್‌ನಲ್ಲಿ ಔತಣಕೂಟದ ಸಭೆ ನಡೆಸಿದ್ದರು. ಇದೀಗ ಸುಮಾರು 40ಕ್ಕೂ ಅಧಿಕ ಶಾಸಕರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ ಸಂಪುಟ ಪುನರ್ ರಚನೆ ಬೇಡಿಕೆ ಇಟ್ಟಿದ್ದಾರೆ.

ವಿಧಾನಸೌಧದಲ್ಲಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿದ ಶಾಸಕರು ಶೀಘ್ರದಲ್ಲೇ ಸಂಪುಟ ಪುನಾರಚನೆ ಮಾಡುವಂತೆ ಮನವಿ ಮಾಡಿದರು. ಈ ವೇಳೆ ಶಾಸಕರಾದ ಎನ್.ಎ. ಹ್ಯಾರಿಸ್, ಎಸ್.ಎನ್.ನಾರಾಯಣ ಸ್ವಾಮಿ, ಮಾಗಡಿ ಬಾಲಕೃಷ್ಣ, ಅಶೋಕ್ ಪಟ್ಟಣ ಸೇರಿ ಹಲವರು ಉಪಸ್ಥಿತರಿದ್ದರು.

ನಾಯಕತ್ವ ಬದಲಾವಣೆ ನಡುವೆ ಸಂಪುಟ ಪುನಾರಚನೆ ಕೂಗು ಕೇಳಿ ಬರುತ್ತಿದೆ. ಸಂಪುಟ ಪುನರ್ ರಚನೆ ಸಿದ್ದರಾಮಯ್ಯ ಅವರು ಮುಂದಾಗಿ ದ್ದರೂ ಹೈಕಮಾಂಡ್‌ನಿಂದ ಗ್ರೀನ್ ಸಿಗ್ನಲ್ ಸಿಕ್ಕಿರಲಿಲ್ಲ. ನಾಯಕತ್ವ



ಬದಲಾವಣೆ ವಿಚಾರವಾಗಿ ಸ್ಪಷ್ಟ ನಿರ್ಧಾರ ಕೈಗೊಂಡು ಮತ್ತೆ ಸಂಪುಟ ಪುನರ್ ರಚನೆ ಮಾಡಿ ಎಂಬುವುದು ಡಿ.ಕೆ.ಶಿವಕುಮಾರ್ ಬಣದ ಬೇಡಿಕೆ ಆಗಿದೆ.

ಹೀಗಾಗಿ ಸಂಪುಟ ಪುನರ್ ರಚನೆ ವಿಚಾರ ಪದೇ ಪದೇ ಮುಂದೂಡ ಲ್ಪಡುತ್ತಿದೆ. ರಾಜ್ಯ ಸರ್ಕಾರ ಆಡಳಿತಕ್ಕೆ ಬಂದು ಎರಡೂವರೆ ವರ್ಷ ಕಳೆದಿದೆ. ಎರಡೂವರೆ ವರ್ಷ ಪೂರ್ಣಗೊಂಡ ಬೆನ್ನಲ್ಲೇ ಸಂಪುಟ ಪುನರ್ ರಚನೆ ಆಗಲಿದೆ ಎಂಬ ನಿರೀಕ್ಷೆ ಇತ್ತು. ಆದರೆ ಅದು ಹುಸಿಯಾಗಿದೆ. ಈ ನಿಟ್ಟಿನಲ್ಲಿ ಸಚಿವಾಕಾಂಕ್ಷಿಗಳ ಒತ್ತಡ ಹೆಚ್ಚುತ್ತಿದೆ.


ಉಪ ಚುನಾವಣೆಯ ಬಳಿಕ ಪುನರ್ ರಚನೆ ಬಾಗಲಕೋಟೆ ಮತ್ತು ದಾವಣಗೆರೆ ದಕ್ಷಿಣ ಕ್ಷೇತ್ರಕ್ಕೆ ಏ.9 ರಂದು ಉಪ ಚುನಾವಣೆ ನಡೆಯಲಿದೆ. ಈ ಹಿನ್ನಲೆ ಸಚಿವರಿಗೆ ಜವಾಬ್ದಾರಿ ನೀಡಲಾಗಿದೆ. ಉಪ ಚುನಾವಣೆಯ ಬಳಿಕ ಸಂಪುಟ ಪುನರ್ ರಚನೆ ಆಗುವ ಸಾಧ್ಯತೆ ಇದೆ. ಹೀಗಾಗಿ ಈಗಾಗಲೇ ಒತ್ತಡ ಜೋರಾಗಿದೆ. ಒಂದು ವೇಳೆ ಸಂಪುಟ ಪುನರ್ ರಚನೆ ಆದಲ್ಲಿ 12 ರಿಂದ 15 ಸಚಿವರನ್ನು ಕೈಬಿಡುವ ಸಾಧ್ಯತೆ ಇದೆ. ಹಿರಿಯ ಶಾಸಕರಿಗೆ ಸಂಪುಟದಲ್ಲಿ ಅವಕಾಶ ನೀಡುವ ಸಾಧ್ಯತೆ ಇದೆ. ಈ ಹಿನ್ನಲೆಯಲ್ಲಿ ಆಕಾಂಕ್ಷಿಗಳ ಸಂಖ್ಯೆಯೂ ಹೆಚ್ಚಾಗುತ್ತಿದೆ.

# ಇಂದಿನಿಂದ ಎಸ್‌ಎಸ್‌ಎಲ್‌ಸಿ ಪರೀಕ್ಷೆ

## ಜಿಲ್ಲೆಯ 20,750 ಮಂದಿ ಪರೀಕ್ಷೆಗೆ ನೋಂದಣಿ - 78 ಕೇಂದ್ರಗಳಲ್ಲಿ ಕಟ್ಟುನಿಟ್ಟಿನ ಕ್ರಮ

• ಪ್ರಜೋದಯ ವರದಿ

**ಹಾಸನ :** ವಿದ್ಯಾರ್ಥಿಗಳ ಶೈಕ್ಷಣಿಕ ಭವಿಷ್ಯದ ನಿರ್ಣಾಯಕ ಘಟ್ಟ ಎಂದೇ ಭಾವಿಸುವ 10ನೇ ತರಗತಿ ಅಂತಿಮ ಪರೀಕ್ಷೆ ಬುಧವಾರದಿಂದ ಆರಂಭವಾಗಲಿದೆ.



ಜಿಲ್ಲೆಯಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆ-1 ಬರೆಯಲು 19,718 ಹೊಸ ವಿದ್ಯಾರ್ಥಿಗಳು, 343 ಖಾಸಗಿ ಅಭ್ಯರ್ಥಿಗಳು, 615 ಪುನರಾವರ್ತಿತ ವಿದ್ಯಾರ್ಥಿಗಳು ಹಾಗು 74 ಖಾಸಗಿ ಪುನರಾವರ್ತಿತ ವಿದ್ಯಾರ್ಥಿಗಳು ಸೇರಿ ಒಟ್ಟು 20,750 ಮಂದಿ ಪರೀಕ್ಷೆಗೆ ನೋಂದಾಯಿಸಿ ಕೊಂಡಿದ್ದಾರೆ.

ಪರೀಕ್ಷೆಯು ಮಾ.18ರಿಂದ ಏ.2ರವರೆಗೆ ಪ್ರತಿದಿನ ಬೆಳಿಗ್ಗೆ 10 ರಿಂದ ಮಧ್ಯಾಹ್ನ 1.15ರವರೆಗೆ ಜಿಲ್ಲೆಯಲ್ಲಿ ಒಟ್ಟು 78 ಕೇಂದ್ರಗಳಲ್ಲಿ ನಡೆಯಲಿದೆ. ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಹಾಸನ ನಗರದಲ್ಲಿ 16, ಆಲೂರು ತಾಲ್ಲೂಕಿನಲ್ಲಿ 5, ಅರಸೀಕೆರೆ ತಾಲ್ಲೂಕಿನಲ್ಲಿ 11, ಅರಕಲಗೂಡು ತಾಲ್ಲೂಕಿನಲ್ಲಿ 9, ಬೇಲೂರು ತಾಲ್ಲೂಕಿನಲ್ಲಿ 7, ಚನ್ನರಾಯಪಟ್ಟಣ ತಾಲ್ಲೂಕಿನಲ್ಲಿ 12, ಹೊಳೆನರಸೀಪುರ ತಾಲ್ಲೂಕಿನಲ್ಲಿ 9, ಸಕಲೇಶಪುರ ತಾಲ್ಲೂಕಿನಲ್ಲಿ 9 ಕೇಂದ್ರಗಳನ್ನು ಸ್ಥಾಪನೆ ಮಾಡಲಾಗಿದೆ.

**(ಪರೀಕ್ಷಾ-1 ವೇಳಾಪಟ್ಟಿ)**
**ಮಾ.18-ಪ್ರಥಮ ಭಾಷೆ**
**ಮಾ.23-ವಿಜ್ಞಾನ**
**ಮಾ.25-ದ್ವಿತೀಯ ಭಾಷೆ**
**ಮಾ.28-ಗಣಿತ**
**ಮಾ.30- ತೃತೀಯ ಭಾಷೆ**
**ಏ.2-ಸಮಾಜ ವಿಜ್ಞಾನ**

### ವೆಬ್ ಕಾಸ್ಟಿಂಗ್ ವ್ಯವಸ್ಥೆ

ಪರೀಕ್ಷಾ ಅಕ್ರಮಗಳನ್ನು ತಡೆಗಟ್ಟಲು ಎಲ್ಲಾ ಕೇಂದ್ರ ಗಳಲ್ಲಿ ಸಿ.ಸಿ.ಕ್ಯಾಮೆರಾ ಕಣ್ಗಾವಲು ವ್ಯವಸ್ಥೆ ಕಲ್ಪಿಸಲಾಗಿದೆ. ವೆಬ್ ಕಾಸ್ಟಿಂಗ್ ಮೂಲಕ ಜಿಲ್ಲಾ ಪರೀಕ್ಷಾ ಕೊಠಡಿಗಳ ಚಟುವಟಿಕೆಗಳ ಮೇಲೆ ನಿಗಾ ಇಡಲು ಈಗಾಗಲೇ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಲಾಗಿದೆ. ಪ್ರಶ್ನೆ ಪತ್ರಿಕೆಗಳ ಸುರಕ್ಷಿತ ಸಾಗಣೆಗೆ ತ್ರಿಸದಸ್ಯ ಸಮಿತಿ ರಚಿಸಲಾಗಿದ್ದು, ವಾಹನಗಳಿಗೆ ಜಿ.ಪಿ.ಎಸ್ ಟ್ರ್ಯಾಕಿಂಗ್ ವ್ಯವಸ್ಥೆ ಅಳವಡಿಸಲಾಗಿದೆ. ನಗರ ಮತ್ತು ಗ್ರಾಮಾಂತರ ಪರೀಕ್ಷಾ ಕೇಂದ್ರಗಳಿಗೆ ಅಗತ್ಯವಿರುವ ಮೂಲಸೌಕರ್ಯ ಕಲ್ಪಿಸಿ, ನೋಂದಣಿ ಸಂಖ್ಯೆಗಳನ್ನು ಹಾಕುವುದು ಸೇರಿ ಬಹುತೇಕ ಎಲ್ಲಾ ಕೆಲಸವನ್ನು ಮಂಗಳವಾರವೇ ಶಿಕ್ಷಣ ಇಲಾಖೆ ಅಧಿಕಾರಿಗಳು ಮತ್ತು ಶಿಕ್ಷಕರು ಪೂರ್ಣ ಗೊಳಿಸಿದರು.

### ಪರೀಕ್ಷಾ ಕೇಂದ್ರ ಸುತ್ತಮುತ್ತ ನಿಷೇಧಾಜ್ಞೆ

ಪರೀಕ್ಷಾ ಕೇಂದ್ರಗಳ ಸುತ್ತಮುತ್ತ 200 ಮೀಟರ್ ವ್ಯಾಪ್ತಿಯನ್ನು ಸಂಬಂಧಿತ ಕಾನೂನು ಪ್ರಕಾರ ನಿಷೇಧಿತ ಪ್ರದೇಶವಾಗಿ ಘೋಷಿಸಲಾಗಿದೆ. ಪ್ರತಿಯೊಂದು ಕೇಂದ್ರ ದಲ್ಲೂ ಪೊಲೀಸ್ ಬಂದೋಬಸ್ತ್ ವ್ಯವಸ್ಥೆ ಮಾಡಲಾಗಿದೆ.

ಪರೀಕ್ಷಾ ಕೇಂದ್ರಗಳ ಸುತ್ತಲಿನ ಜೆರಾಕ್ಸ್ ಹಾಗು ಸೈಬರ್ ಕೇಂದ್ರಗಳನ್ನು ಮುಚ್ಚುವಂತೆ ಸೂಚಿಸಲಾಗಿದೆ.

ಪರೀಕ್ಷಾ ಕೇಂದ್ರಗಳಲ್ಲಿ ಮುಖ್ಯ ಅಧೀಕ್ಷಕರನ್ನು ಹೊರತು ಪಡಿಸಿ ಇತರೆ ಸಿಬ್ಬಂದಿಗೆ ಮೊಬೈಲ್ ಬಳಕೆ ನಿಷೇಧಿಸ ಲಾಗಿದೆ. ವಿದ್ಯಾರ್ಥಿಗಳು ಮೊಬೈಲ್, ಸ್ಮಾರ್ಟ್ ವಾಚ್, ಬ್ಲೂಟೂತ್ ಸೇರಿ ಯಾವುದೇ ವಿದ್ಯುನ್ಮಾನ ಉಪಕರಣ ಗಳನ್ನು ತರಲು ಅವಕಾಶವಿರುವುದಿಲ್ಲ.

### ವಿಕಲಚೇತನರಿಗೆ ವಿಶೇಷ ಆದ್ಯತೆ

ವಿಕಲಚೇತನ ವಿದ್ಯಾರ್ಥಿಗಳಿಗೆ ಭಾಷಾ ವಿನಾಯಿತಿ, ವಾಚಕರ ಸಹಾಯ, ಹೆಚ್ಚುವರಿ ಒಂದು ಗಂಟೆ ಕಾಲಾವಕಾಶ ಹಾಗೂ ನೆಲ ಮಹಡಿಯಲ್ಲಿ ಆಸನ ವ್ಯವಸ್ಥೆ ಸೇರಿ ವಿಶೇಷ ಸೌಲಭ್ಯಗಳನ್ನು ಒದಗಿಸಲಾಗಿದೆ. ಎಸ್‌ಎಸ್‌ಎಲ್‌ಸಿಯಲ್ಲಿ 225 ಈ ಸೌಲಭ್ಯ ಪಡೆಯಲಿದ್ದಾರೆ. ಪ್ರತಿಯೊಂದು ಕೇಂದ್ರಕ್ಕೂ ಆರೋಗ್ಯ ಇಲಾಖೆ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ.

ಪರೀಕ್ಷೆಗೆ ಹಾಜರಾಗುವ ಎಲ್ಲಾ ವಿದ್ಯಾರ್ಥಿಗಳಿಗೆ ಪರೀಕ್ಷಾ ಪ್ರವೇಶ ಪತ್ರವನ್ನು ತೋರಿಸಿ, ಕೆಎಸ್‌ಆರ್‌ಟಿಸಿ ಮತ್ತು ನಗರ ಸಾರಿಗೆ ಬಸ್‌ಗಳಲ್ಲಿ ಪರೀಕ್ಷಾ ಕೇಂದ್ರಕ್ಕೆ ತೆರಳಲು ಮತ್ತು ಹಿಂತಿರುಗಲು ಉಚಿತ ಪ್ರಯಾಣಕ್ಕೆ ಅವಕಾಶ ಕಲ್ಪಿಸಲಾಗಿದೆ. ಪರೀಕ್ಷಾ ದಿನಗಳಲ್ಲಿ ನಿರಂತರ ವಿದ್ಯುತ್ ಪೂರೈಕೆಗಾಗಿ ಸೆಸ್ಕಾಂ ಅಧಿಕಾರಿಗಳಿಗೆ ಸೂಚಿಸಲಾಗಿದೆ.

ಸಾಮಾಜಿಕ ತಾಣಗಳ ಮೇಲೆ ನಿಗಾ

ವಾಟ್ಸ್‌ಪ್, ಟೆಲಿಗ್ರಾಮ್, ಇನ್ಸ್ಟಾಗ್ರಾಮ್ ಮುಂತಾದ ಸಾಮಾಜಿಕ ಜಾಲತಾಣಗಳಲ್ಲಿ ನಕಲಿ ಪ್ರಶ್ನೆ ಪತ್ರಿಕೆ ಹರಿಬಿಡುವವರ ವಿರುದ್ಧ ಮತ್ತು ವದಂತಿ ಹಬ್ಬಿಸುವವರ ವಿರುದ್ಧ ಭಾರತೀಯ ನ್ಯಾಯ ಸಂಹಿತೆ ಅಡಿಯಲ್ಲಿ ಕಠಿಣ ಕಾನೂನು ಕ್ರಮ ಜರುಗಿಸಲಾಗುವುದೆಂದು ಶಿಕ್ಷಣ ಇಲಾಖೆ ಎಚ್ಚರಿಸಿದೆ.

# ಮಧ್ಯ ಪ್ರಾಚ್ಯ ಯುದ್ಧ: ಸ್ಥಳೀಯ ಉದ್ಯಮಕ್ಕೆ ಭಾರೀ ಪೆಟ್ಟು

• ಪ್ರಜೋದಯ ವರದಿ

**ಹಾಸನ:** ಮಧ್ಯ ಪ್ರಾಚ್ಯದಲ್ಲಿನ ಯುದ್ಧದ ಪರಿಣಾಮವು ತೈಲ ಹಾಗು ಅನಿಲ ಆಧಾರಿತ ಉತ್ಪನ್ನಗಳ ತಯಾರಿಕೆ ಮೇಲಷ್ಟೇ ಅಲ್ಲದೆ, ಸ್ಥಳೀಯ ಕೈಗಾರಿಕೆಗಳ ಉತ್ಪಾದನಾ ವಸ್ತುಗಳ ರಫ್ತಿನ ಮೇಲೂ ಬಹು ದೊಡ್ಡ ಪೆಟ್ಟು ಬಿದ್ದಿದೆ.



ತೈಲ ಹಾಗು ಅನಿಲ ಪೂರೈಕೆಯ ಕೊರತೆಯಿಂದಾಗಿ ಕೈಗಾರಿಕೆಗಳು ಹೋಟೆಲ್ ಉದ್ಯಮದ ಮೇಲೆ ಹೊಡೆತ ಕೊಟ್ಟರೆ, ಸ್ಥಳೀಯ ಕಾರ್ಖಾನೆಗಳಿಂದ ಮಧ್ಯ ಪ್ರಾಚ್ಯದ ರಾಷ್ಟ್ರಗಳಿಗೆ ರಫ್ತಾಗುತ್ತಿದ್ದ ಉತ್ಪನ್ನಗಳ ಮೇಲೂ ಪರಿಣಾಮ ಬೀರಿದೆ. ನಗರದ ಬೂವನಹಳ್ಳಿಯಲ್ಲಿರುವ ಭಾರತಿ ಅಸೋಸಿಯೇಟ್ಸ್ ಅನೇಕ ವರ್ಷಗಳಿಂದಲೂ ಹಾಸನ, ಚಿತ್ರದುರ್ಗ, ಮಂಡ್ಯ, ಮೈಸೂರು, ತುಮಕೂರು ಮತ್ತಿತರ ಜಿಲ್ಲೆಗಳಲ್ಲಿ ರೈತರು ಬೆಳೆದ ಮಿಡಿ ಸೌತೆಕಾಯಿ ಯನ್ನು ಖರೀದಿ ಮಾಡಿ ಅದರಿಂದ ತಯಾರಿಸಲ್ಪಟ್ಟ 50ಕ್ಕೂ ಹೆಚ್ಚು ಬಗೆಯ ಉಪ್ಪಿನ ಕಾಯಿಯನ್ನು ರಫ್ತು ಮಾಡುತ್ತಿದೆ.

ತಿಂಗಳ ಹಿಂದೆ ಈ ಕೈಗಾರಿಕೆಯಲ್ಲಿ ಉತ್ಪಾದಿಸಿದಂತಹ ಉಪ್ಪಿನಕಾಯಿಯನ್ನು 4 ಕಂಟೇನರ್‌ಗಳ ಮೂಲಕ ಯುದ್ಧ ಪೀಡಿತ ಕತಾರ್, ಸೌದಿ ಅರೇಬಿಯಾ, ಈಜಿಫ್ಟ್ ಮತ್ತಿತರ ರಾಷ್ಟ್ರಗಳಿಗೆ ರಫ್ತು ಮಾಡಲಾಗಿತ್ತು. ಆದರೆ, ಮಂಗಳೂರು ಬಂದರೂ ಮೂಲಕ ಇರಾನ್ ಹಿಡಿತದಲ್ಲಿರುವ ಹೊರ್ಮುಜ್ ಜಲಸಂಧಿಯ ಮೂಲಕ ತಲುಪಬೇಕಾಗಿರುವುದರಿಂದ ಕಂಟೇನರ್‌ಗಳು ಮಂಗಳೂರಿನಿಂದಲೇ ವಾಪಾಸ್ ಆಗಿವೆ. ಈ ಪರಿಣಾಮ ವಿದೇಶಗಳಿಗೆ ತಲುಪಬೇಕಿದ್ದ ಉತ್ಪನ್ನ ವಾಪಾಸ್ ಆದದ್ದಲ್ಲದೆ, ತಯಾರಾಗಿ ದಾಸ್ತಾನಿರುವ ಉತ್ಪನ್ನ ಕೂಡ ಕೈಗಾರಿಕೆಯಲ್ಲಿಯೇ ಉಳಿಯುವಂತಾಗಿದೆ.

ಉಪ್ಪಿನಕಾಯಿ ರಫ್ತಿಗೆ ಮಾತ್ರ ಯುದ್ಧದ ದುಷ್ಪರಿಣಾಮ ಬೀರಿಲ್ಲ. ತೈಲ ಪೂರೈಕೆಯಾಗದ ಕಾರಣ ಅನೇಕ ಬೇಕರಿ ತಿನಿಸುಗಳು, ಹಪ್ಪಳ- ಸಂಡಿಗೆ ಯಂತಹ ಕಾರ್ಖಾನೆಗಳು ಕೆಲಸ ಸ್ಥಗಿತಗೊಳಿಸಿವೆ. ಕೃಷಿ ಉಪಕರಣ ಗಳಾದ ಪೈಪ್ ಮತ್ತಿತರ ಸಾಮಾಗ್ರಿಗಳ ತಯಾರಿಕೆಗೆ ಬಳಸುವ ಕ್ರೂಡ್ ಆಯಿಲ್ ಪೂರೈಕೆ ಸ್ಥಗಿತ ಗೊಂಡಿರುವುದರಿಂದ ಕೃಷಿ ಉತ್ಪನ್ನಗಳ ಬೆಲೆಯು ಭಾರೀ ಪ್ರಮಾಣದಲ್ಲಿ ಏರಿಕೆಯಾಗಿದೆ.

# ಜನಸಂಖ್ಯೆಗೆ ಅನ್ವಯ ಆಸ್ಪತ್ರೆ ತೆರೆಯುವ ನಿರ್ಧಾರ ಕೈಬಿಡಿ : ಸಿಮೆಂಟ್ ಮಂಜು

• ಪ್ರಜೋದಯ ವರದಿ

**ಹಾಸನ:** ಸರ್ಕಾರ 10 ಸಾವಿರ ಜನಸಂಖ್ಯೆಗೆ ಒಂದು ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಸೀಮಿತ ಗೊಳಿಸುವ ಸುದ್ದಿ ಕೇಳಿ ಬರುತ್ತಿದ್ದು, ಆ ರೀತಿಯ ಚಿಂತನೆಯನ್ನು ಮಲೆನಾಡು ಪ್ರದೇಶಕ್ಕೆ ಅನ್ವಯ ಮಾಡದಂತೆ ಶಾಸಕ ಸಿಮೆಂಟ್ ಮಂಜು ಅವರು ಅಧಿವೇಶನದಲ್ಲಿ ಒತ್ತಾಯಿಸಿದರು.



ಮಂಗಳವಾರ ಕಲಾಪದಲ್ಲಿ ಮಾತನಾಡಿದ ಅವರು, ಮಲೆನಾಡ ಭಾಗದಲ್ಲಿ ಹಳ್ಳಿಗಳು ಹತ್ತರಿಂದ ಹದಿನೈದು ಕಿಲೋ ಮೀಟರ್ ದೂರವಿದ್ದು ಮತ್ತು ಕಾರ್ಮಿಕ ವರ್ಗಕ್ಕೆ ತೊಂದರೆಯಾಗಲಿದೆ. ಜನಸಂಖ್ಯೆಗೆ ಅನುಗುಣವಾಗಿ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ತೆರೆಯುವ ಯೋಜನೆಗೆ ಮಲೆನಾಡು ಭಾಗವು ಅನ್ವಯಿಸದಂತೆ ಕೋರಿದರು.

ಮಲೆನಾಡು ಭಾಗದಲ್ಲಿ ಕಾಡಾನೆ ಹಾವಳಿ ಹೆಚ್ಚಿರುವುದರಿಂದ ಪ್ರತಿ ಹೋಬಳಿಗೂ ಒಂದು ಆ್ಯಂಬುಲೆನ್ಸ್ ನೀಡಬೇಕು. ಸಕಲೇಶಪುರದಲ್ಲಿ ತಾಯಿ ಮತ್ತು ಮಕ್ಕಳ ಆಸ್ಪತ್ರೆ ಸ್ಥಾಪನೆ, ಖಾಲಿ ಇರುವ ವೈದ್ಯ ಮತ್ತು ವೈದ್ಯಕೀಯ ಸಿಬ್ಬಂದಿ ನೇಮಿಸುವಂತೆ ಒತ್ತಾಯಿಸಿದರು.

ವರ್ಷದ ಇಂತಿಷ್ಟು ಹೆರಿಗೆಯಾದರೆ ಮಾತ್ರ ತಾಯಿ ಮತ್ತು ಮಕ್ಕಳ ಆಸ್ಪತ್ರೆ ತೆರೆಯುವುದಾಗಿ ಹೇಳಲಾಗುತ್ತಿದೆ. ಸಕಲೇಶಪುರ ತಾಲ್ಲೂಕಿನಲ್ಲಿ 800 ರಿಂದ 1,000 ಹೆರಿಗೆ ಆಗಿದೆ. ಆದರೆ, ಒಂದು ವರ್ಷ ಕಡಿಮೆಯಾಗಿದೆ ಎಂಬ ಕಾರಣಕ್ಕೆ ಆಸ್ಪತ್ರೆ ನೀಡುವುದಿಲ್ಲವೆಂದು ಹೇಳಲಾಗುತ್ತಿದೆ. ಹೀಗಾಗಿ ಅಂಕಿ-ಅಂಶಗಳನ್ನು ಪರಿಗಣನೆಗೆ ತೆಗೆದುಕೊಳ್ಳದೆ ತಾಲ್ಲೂಕಿನಲ್ಲಿ ತಾಯಿ ಮತ್ತು ಮಕ್ಕಳ ಆಸ್ಪತ್ರೆ ಸ್ಥಾಪನೆಗೆ ಮುಂದಾಗಬೇಕೆಂದು ಮನವಿ ಮಾಡಿದರು. ಇದೇ ವೇಳೆ ಹಗಲಿರುಳು ಸೇವೆ ಸಲ್ಲಿಸುವ ಆಶಾ ಕಾರ್ಯಕರ್ತೆಯರ ವಜಾ ಮಾಡುವ ಚಿಂತನೆಯನ್ನು ಸರ್ಕಾರ ತಕ್ಷಣ ಕೈಬಿಡಬೇಕೆಂದು ಆಗ್ರಹಿಸಿದರು.

# ಬೇಲೂರಿನಲ್ಲಿ ಮತ್ತೆ ಕಾಣಿಸಿಕೊಂಡ ಕಾಡಾನೆ ಹಿಂಡು

• ಪ್ರಜೋದಯ ವರದಿ

**ಬೇಲೂರು:** ಕೆಲ ದಿನಗಳ ಕಾಲ ಬೇರೆಡೆಗೆ ತೆರಳಿದ್ದ ಕಾಡಾನೆಗಳ ಹಿಂಡು ಮತ್ತೆ ತಾಲ್ಲೂಕಿನ ವಿವಿಧೆಡೆ ತಮ್ಮ ಉಪಟಳವನ್ನು ಮುಂದುವರೆಸಿವೆ.

ತಾಲ್ಲೂಕಿನ ಅರೇಹಳ್ಳಿ ಹೋಬಳಿಯಲ್ಲಿ ಮರಿಯಾನೆ ಸೇರಿ 20ಕ್ಕೂ ಹೆಚ್ಚಿರುವ ಕಾಡಾನೆಗಳ ಹಿಂಡು ಕಾಣಿಸಿಕೊಂಡು ಸ್ಥಳೀಯರಲ್ಲಿ ಆತಂಕ ಮೂಡಿಸಿದೆ. ಅರೇಹಳ್ಳಿ, ಸಿರಗುರ, ಅಂಕಿಹಳ್ಳಿ, ಅನುಘಟ್ಟ ಸುತ್ತಮುತ್ತ ಹತ್ತಾರು ಆನೆಗಳು ಒಟ್ಟಿಗೆ ಸಂಚರಿಸುತ್ತಿವೆ. ಇದೇ ಕಾಡಾನೆಗಳ ಹಿಂಡಿನಲ್ಲಿ ಭೀಮ ಕಾಡಾನೆಯೂ ಸೇರಿದೆ. ಒಂದು ಕಾಫಿ ತೋಟದಿಂದ ಮತ್ತೊಂದು ಕಾಫಿ ತೋಟಕ್ಕೆ ಗಜಪಡೆ ತೆರಳುವ ದೃಶ್ಯ ಮೊಬೈಲ್‌ನಲ್ಲಿ ಸೆರೆಯಾಗಿದೆ. ಕಾಡಾನೆಗಳು ರಸ್ತೆ ದಾಟುವಾಗ ವಾಹನ ನಿಲ್ಲಿಸಿಕೊಂಡು ಸವಾರರು ನಿಲ್ಲಬೇಕಾಯಿತು.

ಕಳೆದ ಒಂದು ತಿಂಗಳಿನಿಂದ ಕಾಡಾನೆ ಹಿಂಡು ಕಾಣೆಯಾಗಿದ್ದವು. ಆದರೀಗ ಯುಗಾದಿ ಹತ್ತಿರದಲ್ಲಿರುವಾಗ ಚಿಕ್ಕಮಗಳೂರು ಕಡೆಯಿಂದ ಇಷ್ಟೂ ಆನೆ ವಾಪಾಸ್ ಆಗಿವೆ. ಸುದ್ದಿ



ತಿಳಿದ ಸ್ಥಳಕ್ಕೆ ಅರಣ್ಯ ಇಲಾಖೆ ಇಟಿಎಫ್ ಸಿಬ್ಬಂದಿ ಭೇಟಿ ನೀಡಿ, ಕಾಡಾನೆಗಳ ಚಲನವಲನ ಗಮನಿಸಿ ಸ್ಥಳೀಯರಿಗೆ ಮಾಹಿತಿ ನೀಡುತ್ತಿದ್ದಾರೆ.

ಎಲ್ಲೆಲ್ಲಿ ಕಾಡಾನೆಗಳ ಸಂಚಾರ

ಬೇಲೂರು ತಾಲ್ಲೂಕಿನ ಕಾನಹಳ್ಳಿ ಹಾಗು ನೆರ್ಲಮಕ್ಕಿ ಗ್ರಾಮದ ಕಾನಹಳ್ಳಿ ಫಾರೆಸ್ಟ್ ಮತ್ತು ಸೂಳೆಗುಡ್ಡ ಎಸ್ಟೇಟ್, ತಾರಾನಾಥ್ ಅವರ ತೋಟ , ಶಿರಗುರ ಗ್ರಾಮದ ಬಿರ್ ಬನ್ ಕಾಡು ಸುತ್ತಮುತ್ತ ಕಾಡಾನೆಗಳು ಕಂಡುಬಂದಿರುತ್ತವೆ.

ಸಕಲೇಶಪುರ ತಾಲ್ಲೂಕಿನ ಹೆತ್ತೂರು ಮತ್ತು ಯಸಳೂರು ಹೋಬಳಿ ವ್ಯಾಪ್ತಿಯ ಮರ್ಜನಹಳ್ಳಿ ಗ್ರಾಮದ ಮೇಲ್ ಗದ್ದೆ, ಕಿರ್ಕಳ್ಳಿ ಗ್ರಾಮದ ಒಂಟಿಗದ್ದೆ, ಬಾಳೆಹಳ್ಳ, ಹಳ್ಳಿಗದ್ದೆ ಗ್ರಾಮದ ಅಕೇಶಿಯಾ ಫಾರೆಸ್ಟ್, ಐಗೂರು ಗ್ರಾಮದ ನಿರ್ಮಾ ಎಸ್ಟೇಟ್, ಬಾಣಗೇರಿ ಬೆಟ್ಟ, ಜೇಡಿಗದ್ದೆ ಸುತ್ತಮುತ್ತ ಕಾಡಾನೆಗಳು ಕಂಡು ಬಂದಿವೆ. ಹೀಗಾಗಿ ಸಾರ್ವಜನಿಕರು ಕಾಡಾನೆಗಳಿಂದ ಎಚ್ಚರಿಕೆಯಿಂದ ಇರಬೇಕಾಗಿ ಇಟಿಎಫ್ ಸಿಬ್ಬಂದಿ ಕೋರಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ತುರ್ತು ಸಹಾಯ ವಾಣಿ 9480817460 ಅಥವಾ 9481991326 ಸಂಪರ್ಕಿಸುವಂತೆ ತಿಳಿಸಲಾಗಿದೆ.

# ಬಾಗಿಲಿಗೆ ಸಿಲುಕಿ ವಿದ್ಯಾರ್ಥಿಯ ಬೆರಳು ತುಂಡು

• ಪ್ರಜೋದಯ ವರದಿ

**ಸಕಲೇಶಪುರ:** ತರಗತಿ ಕೊಠಡಿಯ ಬಾಗಿಲನ್ನು ಜೋರಾಗಿ ಹಾಕಿದ್ದರಿಂದ ಮೈ ಮರೆತು ನಿಂತಿದ್ದ ವಿದ್ಯಾರ್ಥಿಯ ಎರಡು ಬೆರಳು ತುಂಡರಿಸಿರುವ ಘಟನೆ ತಾಲ್ಲೂಕಿನ ಬಾಳ್ಳುಪೇಟೆ ಸರ್ಕಾರಿ ಬಾಲಕರ ವಸತಿ ಶಾಲೆಯಲ್ಲಿ ಮಂಗಳವಾರ ನಡೆದಿದೆ.

ತಾಲ್ಲೂಕಿನ ಮಳಲಿ ಗ್ರಾಮದ 6ನೇ ತರಗತಿ ವಿದ್ಯಾರ್ಥಿ ದಿನೇಶ್ ಗಾಯಾಳು. ಡಿ ದರ್ಜೆ ನೌಕರ ರೊಬ್ಬರು ಕಸ ಗುಡಿಸುತ್ತಿದ್ದಾಗ ಅಲ್ಲಿಯೇ ಇದ್ದ ಏಳನೇ ತರಗತಿ ವಿದ್ಯಾರ್ಥಿಗಳು ಜೋರಾಗಿ ಬಾಗಿಲು ತಳ್ಳಿದ್ದಾರೆ. ಮತ್ತೊಂದು ಬದಿಯಲ್ಲಿ ಬಾಗಿಲಿಗೆ ಕೈ



ಕೊಟ್ಟು ದಿನೇಶ್ ನಿಂತಿದ್ದನ್ನು ಗಮನಿಸದಿರುವುದರಿಂದ ಅವಘಡ ಸಂಭವಿಸಿದೆ. ತಕ್ಷಣ ಶಿಕ್ಷಕರು ಸಿಬ್ಬಂದಿ ವಿದ್ಯಾರ್ಥಿಯನ್ನು ಸಮೀಪದ ಆಸ್ಪತ್ರೆಗೆ ದಾಖಲಿಸಿದರು. ತರಗತಿ ಕೊಠಡಿಗಳಲ್ಲಿ ಸುರಕ್ಷಿತ ಬಾಗಿಲು ವ್ಯವಸ್ಥೆ, ಮಕ್ಕಳ ಮೇಲ್ವಿಚಾರಣೆ ಹಾಗು ಮುನ್ನೆಚ್ಚರಿಕಾ ಕ್ರಮಗಳನ್ನು ಕಟ್ಟುನಿಟ್ಟಾಗಿ ಜಾರಿಗೆ ತರಬೇಕೆಂಬ ಒತ್ತಾಯ ವ್ಯಕ್ತವಾಗಿದೆ.

## ಕಾರು ಡಿಕ್ಕಿ : ಮಹಿಳೆ ಸಾವು

• ಪ್ರಜೋದಯ ವರದಿ

**ಚನ್ನರಾಯಪಟ್ಟಣ :** ಮನೆ ಮುಂದಿನ ರಸ್ತೆ ಪಕ್ಕ ನಿಂತಿದ್ದಾಗ ವೇಗವಾಗಿ ಬಂದ ಕಾರು ಡಿಕ್ಕಿಯಾಗಿ ಮಹಿಳೆ ಮೃತಪಟ್ಟಿರುವ ಘಟನೆ ತಾಲ್ಲೂಕಿನ ಮಲ್ಲೇನಹಳ್ಳಿ ಗ್ರಾಮದಲ್ಲಿ ನಡೆದಿದೆ.

ಗ್ರಾಮದ ಚನ್ನಮ್ಮ ಮೃತರು. ಲಕ್ಷ್ಮೀದೇವಿ ದೇವಸ್ಥಾನದ ರಸ್ತೆಯಿಂದ ಚಾಲಕ ಅಜಾಗರೂಕತೆಯಿಂದ ಕಾರು ಓಡಿಸಿಕೊಂಡು ಬಂದು ಮಹಿಳೆಗೆ ಡಿಕ್ಕಿ ಮಾಡಿದ್ದಾನೆ. ಬಲಗೈ, ಕಾಲು, ಹೊಟ್ಟೆ ಭಾಗಕ್ಕೆ ಬಲವಾದ ಪೆಟ್ಟು ಬಿದ್ದಿದ್ದರಿಂದ ಮಹಿಳೆಯನ್ನು ಆಸ್ಪತ್ರೆಗೆ ದಾಖಲಿಸಲಾಯಿತಾದರೂ ಚಿಕಿತ್ಸೆ ಫಲಿಸದೆ ಮೃತಪಟ್ಟಿದ್ದಾರೆ. ಪಟ್ಟಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಖಾಸಗಿ ಕಂಪನಿಗಳಿಗಷ್ಟೇ ಆದ್ಯತೆ | 50 ಸಾವಿರ ಜನರಿಗೆ ಒಬ್ಬರ ಪರಿಗಣನೆಗೆ ವಿರೋಧ

# ಕುಕ್ಕುಟೋದ್ಯಮಿಗಳ ರಕ್ಷಣಾ ಸಮಿತಿಯಲ್ಲಿ ನಮ್ಮನ್ನು ಪರಿಗಣಿಸಿ

• ಪ್ರಜೋದಯ ವರದಿ

**ಹಾಸನ:** ಕುಕ್ಕುಟೋದ್ಯಮಿಗಳು ಹಾಗು ಕಂಪನಿಗಳ ನಡುವೆ ಸಂಪರ್ಕ ಸೇತುವೆಯಾಗಿ ಸರ್ಕಾರ ರಚಿಸಿರುವ ಸಮಿತಿಯಲ್ಲಿ ಕೇವಲ ಒಬ್ಬ ಕೋಳಿ ಸಾಕಾಣೆದಾರರನ್ನು ಪರಿಗಣಿಸಿರುವುದಕ್ಕೆ ರಾಜ್ಯ ಕೋಳಿ ಸಾಕಾಣಿಕೆ ರೈತರ ಕ್ಷೇಮಾಭಿವೃದ್ಧಿ ಸಂಘವು ಆಕ್ಷೇಪ ವ್ಯಕ್ತಪಡಿಸಿದೆ.

ಕೋಳಿ ಸಾಕಾಣಿಕೆದಾರರಿಂದ ಸಗಟು ಖರೀದಿ ಮಾಡುವ ಕಂಪನಿಗಳು ರೈತರಿಗೆ ನೀಡುತ್ತಿರುವ ದರವನ್ನು ಪ್ರತಿ ಕೆ.ಜಿ.ಗೆ 20 ರೂ.ಗೆ ಹೆಚ್ಚಿಸುವುದು ಸೇರಿ ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಸರ್ಕಾರಕ್ಕೆ ಆಗ್ರಹಿಸಲಾಗಿತ್ತು. ಆ ಹಿನ್ನೆಲೆಯಲ್ಲಿ ಪಶು ಸಂಗೋಪನಾ ಸಚಿವ ಕೆ. ವೆಂಕಟೇಶ್ ಅವರು ಸಮಿತಿ ರಚಿಸಿದ್ದಾರೆಯಾದರೂ ಕೇವಲ ಒಬ್ಬ ಕೋಳಿ ಸಾಕಣೆದಾರರನ್ನು ಸೇರಿಸಿಕೊಳ್ಳಲಾಗಿದೆ. ಉಳಿದಂತೆ ಇಲಾಖೆ ಅಧಿಕಾರಿಗಳು ಹಾಗು ಕಂಪನಿ ಪ್ರತಿನಿಧಿಗಳಿಗೆ ಪ್ರಾಶಸ್ತ್ಯ ನೀಡಲಾಗಿದೆ. ರಾಜ್ಯಾದ್ಯಂತ 50 ಸಾವಿರ ಕೋಳಿ ಸಾಕಣೆದಾರರಿದ್ದು, ಎಲ್ಲರ ಪ್ರತಿನಿಧಿಯಾಗಿ ಒಬ್ಬರನ್ನು ಪರಿಗಣಿಸಿದರೆ ಸಮಸ್ಯೆಗಳನ್ನು ಹೇಳಿಕೊಳ್ಳಲು ಸಾಧ್ಯವಾಗುವುದಿಲ್ಲ. ಕನಿಷ್ಠ 10 ಸದಸ್ಯರನ್ನಾದರೂ ಸಮಿತಿಗೆ ಸೇರಿಸಿಕೊಳ್ಳಬೇಕೆಂಬ ಒತ್ತಾಯ ಕೇಳಿ ಬಂದಿದೆ.



### ಯುದ್ಧ: ಮೊಟ್ಟೆ ರಫ್ತಿಗೆ ತೊಂದರೆ

ಮಧ್ಯ ಪ್ರಾಚ್ಯ ರಾಷ್ಟ್ರಗಳಲ್ಲಿ ಕಳೆದ 17 ದಿನಗಳಿಂದ ಯುದ್ಧ ನಡೆಯುತ್ತಿರುವ ಹಿನ್ನಲೆಯಲ್ಲಿ ಕೋಳಿ ಮೊಟ್ಟೆ ಮಾರಾಟದ ಮೇಲೆ ಪರಿಣಾಮ ಬೀರಿದೆ. ರಾಜ್ಯದ ಮೊಟ್ಟೆಗಳಿಗೆ ಅಮೇರಿಕಾ, ದುಬೈ ಸೇರಿ ಅನೇಕ ರಾಷ್ಟ್ರಗಳಲ್ಲಿ ಹೆಚ್ಚಿನ ಬೇಡಿಕೆ ಇತ್ತು. ಹಲವು ದಿನಗಳಿಂದ ಬೇಡಿಕೆ ಕಡಿಮೆಯಾಗಿದೆ. ಕುಕ್ಕುಟೋದ್ಯಮಿಗಳು ನಷ್ಟ ಅನುಭವಿಸುವಂತಾಗಿದೆ. ಕೋಳಿ ಮಾಂಸ ಮಾರಾಟದಲ್ಲಿ ವ್ಯತ್ಯಯವಾಗಿಲ್ಲವೆಂದು ತಿಳಿದುಬಂದಿದೆ.

> **ಖಾಸಗಿ ಕಂಪನಿಗಳು ಲಾಭಕ್ಕಾಗಿ ಕೋಳಿ ಸಾಕಾಣಿಕೆದಾರರ ಮೇಲೆ ಗದಾ ಪ್ರಹಾರ ನಡೆಸುತ್ತಿದ್ದಾರೆ. ರಾಜ್ಯದಲ್ಲಿ 50 ಹಾಗು ಜಿಲ್ಲೆಯಲ್ಲಿ 2 ಸಾವಿರ ಕೋಳಿ ಸಾಕಾಣಿಕೆದಾರರಿದ್ದಾರೆ. ಸರ್ಕಾರ ನಮ್ಮ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸದಿದ್ದರೆ ಭವಿಷ್ಯದ ದಿನಗಳು ಮಾರಕವಾಗುತ್ತವೆ.**
>
> **-ಚಂದ್ರಶೇಖರ್, ಕೋಳಿ ಸಾಕಾಣಿಕೆ ರೈತರ ಕ್ಷೇಮಾಭಿವೃದ್ಧಿ ಸಂಘದ ರಾಜ್ಯಾಧ್ಯಕ್ಷ**

ರಾಜ್ಯದ 50 ಸಾವಿರ ಕೋಳಿ ಸಾಕಾಣಿಕೆ ರೈತರು ಸಂಕಷ್ಟದಲ್ಲಿದ್ದು, ಸಮಿತಿ ವರದಿ ಬರುವರೆಗೂ ತಾತ್ಕಾಲಿಕವಾಗಿ ದರ ನಿಗದಿಪಡಿಸಬೇಕು. ಶೇ.90ರಷ್ಟು ರೈತರು ಒಪ್ಪಂದ ಪದ್ಧತಿಯಲ್ಲಿ ಕೋಳಿ ಸಾಕಾಣಿಕೆ ಮಾಡುತ್ತಿದ್ದು, ಶೆಡ್ ನಿರ್ಮಾಣಕ್ಕಾಗಿ ಬ್ಯಾಂಕ್‌ನಿಂದ ಸಾಲ ಪಡೆದು ಆರ್ಥಿಕ ವೆಚ್ಚವನ್ನು ಸರಿದೂಗಿಸಿ ಜೀವನ ಸಾಗಿಸುತ್ತಿದ್ದಾರೆ.

**ಈಗ ಸಿಗುತ್ತಿರುವುದು ಕೇವಲ 6 ರೂ.**

ಕೋಳಿ ಖರೀದಿಸುವ ಖಾಸಗಿ ಕಂಪನಿಯವರು ಸರಿಯಾದ ರೀತಿಯಲ್ಲಿ ರೈತರಿಗೆ ಗ್ರೋಯಿಂಗ್ ಚಾರ್ಜ್ ನೀಡುತ್ತಿಲ್ಲ. ಕಳೆದ ಐದು ವರ್ಷಗಳ ಹಿಂದೆ ರೈತರ ಸಂಕಷ್ಟಗಳಿಗೆ ಸರ್ಕಾರದ ಸ್ಪಂದಿಸದ ಹಿನ್ನಲೆಯಲ್ಲಿ ಹೋರಾಟ ನಡೆಸಿದ್ದರ ಫಲವಾಗಿ ಪ್ರತಿ ಕೆ.ಜಿ.ಗೆ 6 ರೂಪಾಯಿ 20 ಪೈಸೆ ನಿಗದಿ ಪಡಿಸಲಾಯಿತು. ಪ್ರತಿ ವರ್ಷ ಅದನ್ನು 1 ರೂ. ಹೆಚ್ಚಿಸುವುದಾಗಿ ಭರವಸೆ ನೀಡಿತ್ತು. ಆದರೆ, ಅಂದಿನಿಂದ ಕೇವಲ 6 ರೂಪಾಯಿ 20 ಪೈಸೆ ಮಾತ್ರ ಸಿಗುತ್ತಿದೆ. ಸರ್ಕಾರವೇ ಹೊರಡಿಸಿದಂತೆ ನಿಯಮ ಜಾರಿಯಾಗಿದ್ದರೆ ಈಗ 11 ರೂಪಾಯಿ ಸಿಗಬೇಕಿತ್ತು.

» ನಾಲ್ಕನೇ ಪುಟದಲ್ಲಿ

# ನೀರಾವರಿ ಯೋಜನೆ: ತಜ್ಞರೊಂದಿಗೆ ಡಿ.ಕೆ.ಶಿ. ಸಭೆ

• ಪ್ರಜೋದಯ ವರದಿ

**ನವದೆಹಲಿ:** ಕೃಷ್ಣಾ ಮೇಲ್ದಂಡೆ ಯೋಜನೆ, ಮಹದಾಯಿ, ತುಂಗಭದ್ರಾ, ಮೇಕೆದಾಟು ಮತ್ತಿತರ ಯೋಜನೆಗಳಿಗೆ ಎದುರಾಗಿರುವ ಅಡೆತಡೆಗಳ ನಿವಾರಣೆಗೆ ಕೈ ಗೊಳ್ಳಬೇಕಾದ ಕಾನೂನು ಕ್ರಮಗಳ ಬಗ್ಗೆ ದೆಹಲಿಯ ಕರ್ನಾಟಕ ಭವನದಲ್ಲಿ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ವಕೀಲರೊಂದಿಗೆ ಚರ್ಚಿಸಿದರು.

ಈ ಸಂದರ್ಭದಲ್ಲಿ ಸಚಿವರಾದ ಹೆಚ್.ಕೆ.ಪಾಟೀಲ್, ಎಂ.ಬಿ. ಪಾಟೀಲ್, ಬೋಸರಾಜು, ದೆಹಲಿಯಲ್ಲಿ ಕರ್ನಾಟಕದ ವಿಶೇಷ ಪ್ರತಿನಿಧಿ ಟಿ.ಬಿ.ಜಯಚಂದ್ರ, ರಾಜ್ಯ ಅಡ್ವೋಕೇಟ್ ಜನರಲ್ ಶಶಿಕಿರಣ್ ಶೆಟ್ಟಿ, ನಿವೃತ್ತ ನ್ಯಾ. ನಾಗಮೋಹನ ದಾಸ್, ಸುಪ್ರೀಂ ಕೋರ್ಟ್ ವಕೀಲರಾದ ಮೋಹನ್ ಕಾತರಕಿ, ನಿಶಾಂತ್ ಪಾಟೀಲ, ಮಯಾಂಕ್ ಜೈನ್, ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗಳಾದ ಗೌರವ್ ಗುಪ್ತಾ, ತುಷಾರ್ ಗಿರಿನಾಥ್ ಇತರರಿದ್ದರು.

# ರೈಲ್ವೆ ಪರೀಕ್ಷೆ: ಕೇಂದ್ರದಿಂದ ಕನ್ನಡಿಗರಿಗೆ ಮತ್ತೆ ಅನ್ಯಾಯ

## ಹೋರಾಟಕ್ಕೆ ಮಣಿದು ಪರೀಕ್ಷೆ ರದ್ದು | ಸಿಎಂ ಸಿದ್ದರಾಮಯ್ಯ ಆಕ್ರೋಶ



• ಪ್ರಜೋದಯ ವರದಿ

**ಬೆಂಗಳೂರು:** ರೈಲ್ವೆ ಇಲಾಖೆಯಲ್ಲಿ ಮುಂಬಡ್ತಿ ಪರೀಕ್ಷೆ ವಿಚಾರದಲ್ಲಿ ಕೇಂದ್ರ ಸರ್ಕಾರ ಕನ್ನಡಿಗರಿಗೆ ಅನ್ಯಾಯ ಮಾಡಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ವಾಗ್ದಾಳಿ ನಡೆಸಿದ್ದಾರೆ.

ಮಾ.17ರ ಮಂಗಳವಾರ ನಡೆಯ ಬೇಕಿದ್ದ ಪರೀಕ್ಷೆಯನ್ನು ಕನ್ನಡಪರ ಸಂಘಟನೆ ಗಳ ಭಾರೀ ವಿರೋಧದ ಹಿನ್ನಲೆಯಲ್ಲಿ ರೈಲ್ವೆ ಇಲಾಖೆಯು ದಿಢೀರನೇ ರದ್ದುಪಡಿಸಿ ಕನ್ನಡಿಗ ಉದ್ಯೋಗಿಗಳನ್ನು ಅತಂತ್ರ ಪರಿಸ್ಥಿತಿಗೆ ತಳ್ಳಿದೆ ಎಂದಿದ್ದಾರೆ.

ವಿ.ಸೋಮಣ್ಣ ಅವರು ರೈಲ್ವೆ ಸಚಿವರಾಗಿರುವಾಗಲೇ ಕನ್ನಡಿಗರಿಗೆ ಅನ್ಯಾಯವಾಗಿರುವುದು ದುರದೃಷ್ಟಕರ. ಕೇಂದ್ರ ಸರ್ಕಾರದ ಹಿಂದಿ ಹೇರಿಕೆಯಿಂದಾಗಿ ಕನ್ನಡಿಗ ಉದ್ಯೋಗಾಕಾಂಕ್ಷಿಗಳಿಗೆ ಹಿಂದಿನಿಂದಲೂ ಅನ್ಯಾಯವಾಗುತ್ತಾ ಬಂದಿದೆ. ಆಳುವ ಪಕ್ಷದ ಸಂಸದರು ಈ ಸಂಬಂಧ ವಿರುದ್ಧ ಧ್ವನಿಯೆತ್ತದೆ ಮೌನಕ್ಕೆ ಶರಣಾಗಿದ್ದಾರೆಂದು ಬೇಸರ ತೋಡಿಕೊಂಡಿದ್ದಾರೆ.

ಅದರ ವಿರುದ್ಧ ಕನ್ನಡಿಗರು ನ್ಯಾಯಕ್ಕಾಗಿ ಧ್ವನಿಯೆತ್ತುತ್ತಾ ಬಂದಿದ್ದಾರೆ. ಆದರೆ ಈ ಬಾರಿ ಕನ್ನಡಿಗರಾದ ವಿ.ಸೋಮಣ್ಣ ರೈಲ್ವೆ ಇಲಾಖೆಯ ರಾಜ್ಯ ಸಚಿವರಾಗಿರುವಾಗಲೇ ರೈಲ್ವೆ ಇಲಾಖೆ ಕನ್ನಡ ವಿರೋಧಿ ನಿಲುವು ತಳೆದು ಕನ್ನಡ, ಕರ್ನಾಟಕ ಮತ್ತು ಕನ್ನಡಿಗರಿಗೆ ಅನ್ಯಾಯ ಮಾಡಿರುವುದು ಅತ್ಯಂತ ದುರದೃಷ್ಟಕರ ಎಂದಿದ್ದಾರೆ.

ಸೋಮಣ್ಣ ಅವರು ಕನ್ನಡಿಗರ ಪರವಾಗಿ ನಿಂತು ಅನ್ಯಾಯ ಸರಿಪಡಿಸುತ್ತಾರೆಂಬ ಭರವಸೆಯನ್ನು ನಾನೂ ಇಟ್ಟುಕೊಂಡಿದ್ದೆ. ಆ ನಂಬಿಕೆ ಹುಸಿಯಾಗಿದೆ. ಸೋಮಣ್ಣ ಅವರು ಮಾತನಾಡಲು ಶುರು ಮಾಡಿದರೆ ರೈಲ್ವೆ ಇಲಾಖೆ ಇರುವುದೇ ಕರ್ನಾಟಕಕ್ಕಾಗಿ ಎನ್ನುವಂತೆ ಮಾತಿನ ಅರಮನೆ ಕಟ್ಟುತ್ತಾರೆ. ಅವರು ಮಾತು ಸ್ವಲ್ಪ ಕಡಿಮೆ ಮಾಡಿ ಕರ್ನಾಟಕಕ್ಕಾಗಿ ಮಾಡಬೇಕಾದ ಕೆಲಸವನ್ನು ನಿಷ್ಠೆಯಿಂದ ಮಾಡಲು ಮುಂದಾಗಬೇಕು.

**ಹಿಂದಿ ಭಾಷಿಕರಿಗೆ ನೆರವಾಗುವ ದುರುದ್ದೇಶ**

ಕೇಂದ್ರ ಸರ್ಕಾರಕ್ಕೆ ಹಿಂದಿ ಭಾಷೆ ಮೇಲೆ ಇರುವ ಪ್ರೀತಿ ಮತ್ತು ಕನ್ನಡವೂ ಸೇರಿ ವಿವಿಧ ರಾಜ್ಯ ಭಾಷೆಗಳ ಮೇಲೆ ಇರುವ ತಾತ್ಸಾರ ಮನೋಭಾವದ ದುಷ್ಪರಿಣಾಮವನ್ನು ಕನ್ನಡಿಗರು ಈಗಾಗಲೇ ಅನುಭವಿಸಿದ್ದಾರೆ. ಉತ್ತರ ಭಾರತದ ಹಿಂದಿ ಭಾಷಿಗರಿಗೆ ನೆರವಾಗಬೇಕೆಂಬ ಏಕೈಕ ಉದ್ದೇಶದಿಂದ ಕೇಂದ್ರದ ಪರೀಕ್ಷೆಗಳಲ್ಲಿ ಹಿಂದಿ ಮತ್ತು ಇಂಗ್ಲೀಷ್‌ಗೆ ಮಾತ್ರ ಅವಕಾಶ ನೀಡುವ ಕೇಂದ್ರದ ಭಾಷಾ ದಬ್ಬಾಳಿಕೆ ಯನ್ನು ಸಹಿಸಲು ಸಾಧ್ಯವೇ ಇಲ್ಲ. ಭಾರತ ರಾಜ್ಯಗಳ ಒಕ್ಕೂಟ, ಈ ರಾಜ್ಯಗಳು ಭಾಷೆ ಗಳ ಆಧಾರದಲ್ಲಿಯೇ ರಚನೆ ಯಾಗಿರುವುದನ್ನು ಮರೆಯ ಬಾರದು. ನಾವು ಹಿಂದಿಯನ್ನು ಭಾಷೆಯಾಗಿ ವಿರೋಧಿಸುವುದಿಲ್ಲ, ಹಿಂದಿಯನ್ನು ಕನ್ನಡದ ಮೇಲೆ ಹೇರುವುದನ್ನು ಮಾತ್ರ ಖಂಡಿತ ಸಹಿಸುವುದಿಲ್ಲ. ಆಳುವ ಪಕ್ಷದ ಸಂಸದರು ಪಕ್ಷದ ಮುಲಾಜಿಗೆ ಬಿದ್ದು ಕನ್ನಡಕ್ಕೆ ಆಗುತ್ತಿರುವ ಅನ್ಯಾಯದ ವಿರುದ್ಧ ದನಿ ಎತ್ತದೆ ಬಾಯಿ ಮುಚ್ಚಿಕೊಂಡಿರಬಹುದು, ಆದರೆ ಕನ್ನಡಿಗರು ಜಾಗೃತರಾಗಿದ್ದಾರೆ ಎಂದರು.

ಮುಂದಿನ ದಿನಗಳಲ್ಲಿ ಕನ್ನಡ ಭಾಷಿಕರಿಗೆ ಭಾಷೆಯ ಹೆಸರಲ್ಲಿ ಅನ್ಯಾಯವಾಗದಂತೆ ಕೇಂದ್ರ ಸರ್ಕಾರ ನೋಡಿಕೊಳ್ಳಬೇಕು. ಪ್ರಧಾನಿ ನರೇಂದ್ರ ಮೋದಿ ಅವರೇ ಮಧ್ಯೆ ಪ್ರವೇಶಿಸಿ ಸಂಬಂಧಿತ ಇಲಾಖೆಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಬೇಕು. ರದ್ದುಪಡಿಸಲಾದ ರೈಲ್ವೆ ಇಲಾಖೆಯ ಪರೀಕ್ಷೆಯನ್ನು ಕನ್ನಡದಲ್ಲಿಯೇ ಬರೆಯಲು ಅವಕಾಶ ಕಲ್ಪಿಸಿ ಶೀಘ್ರದಲ್ಲಿಯೇ ನಡೆಸಲು ಕ್ರಮ ಕೈಗೊಳ್ಳಬೇಕೆಂದು ಆಗ್ರಹಪಡಿಸಿದ್ದಾರೆ.

**ಏನಿದು ವಿವಾದ:** ನೈರುತ್ಯ ರೈಲ್ವೆಯಲ್ಲಿ ಗೂಡ್ಸ್ ಟ್ರೈನ್ ಮ್ಯಾನೇಜರ್ 194 ಹುದ್ದೆ ಮತ್ತು ಎಲ್ ಡಿಸಿಇ 101 ಮುಂಬಡ್ತಿ ಹುದ್ದೆಗಳಿಗೆ 2025ರಲ್ಲೇ ಅಧಿಸೂಚನೆ ಹೊರಡಿಸಲಾಗಿತ್ತು. ಆಗ ಕನ್ನಡದಲ್ಲೂ ಪರೀಕ್ಷೆ ಬರೆಯುವ ಅವಕಾಶ ಇದೆ ಎಂದು ತಿಳಿಸಲಾಗಿತ್ತು. ಆದರೆ ಪರೀಕ್ಷೆಗೆ ಇನ್ನೇನು ನಾಲ್ಕೈದು ದಿನಗಳಿರುವಾಗ ಕೇವಲ ಹಿಂದಿ ಮತ್ತು ಇಂಗ್ಲಿಷ್‌ನಲ್ಲಿ ಮಾತ್ರ ಪರೀಕ್ಷೆ ಬರೆಯಲು ಅವಕಾಶ ಎಂದು ಇಲಾಖೆ ತಿಳಿಸಿದ್ದರಿಂದ ಕನ್ನಡಿಗ ಉದ್ಯೋಗಾಕಾಂಕ್ಷಿಗಳ ಅಸಮಾಧಾನಕ್ಕೆ ಕಾರಣವಾಗಿತ್ತು.

ಈ ವೇಳೆ ರೈಲ್ವೆ ಇಲಾಖೆಯ ನಡೆಯ ವಿರುದ್ಧ ಧ್ವನಿಯೆತ್ತಿದ ಕರ್ನಾಟಕ ರಕ್ಷಣಾ ವೇದಿಕೆಯ ಕಾರ್ಯಕರ್ತರು ಬೆಂಗಳೂರು ಮತ್ತು ಹುಬ್ಬಳ್ಳಿಯ ಪರೀಕ್ಷಾ ಕೇಂದ್ರಗಳಲ್ಲಿ ಮಂಗಳವಾರ ಪ್ರತಿಭಟನೆ ನಡೆಸಿದರು. ವಿವಾದದ ಕಾವು ಹೆಚ್ಚುತ್ತಿದ್ದಂತೆ ಎಚ್ಚೆತ್ತುಕೊಂಡ ರೈಲ್ವೆ ಇಲಾಖೆ ಇದೀಗ ಪರೀಕ್ಷೆಯನ್ನು ಮುಂದೂಡಿದೆ. ಪರೀಕ್ಷೆಯ ಮುಂದಿನ ದಿನಾಂಕ ಘೋಷಣೆ ಆಗಿಲ್ಲ.

## ವಿಶ್ವವಿದ್ಯಾಲಯಗಳ ಸ್ಥಿತಿಗತಿ: ಸಚಿವರ ಬೇಸರ

**ಬೆಂಗಳೂರು:** ರಾಜ್ಯದ ಸಾರ್ವಜನಿಕ ವಿಶ್ವವಿದ್ಯಾಲಯಗಳ ಸ್ಥಿತಿಗತಿಗಳ ಬಗ್ಗೆ ಉನ್ನತ ಶಿಕ್ಷಣ ಸಚಿವ ಎಂ.ಸಿ. ಸುಧಾಕರ್ ಅವರು ಅಸಮಾಧಾನ ವ್ಯಕ್ತಪಡಿಸಿದರು.

ಸರ್ಕಾರಿ ವಿಶ್ವವಿದ್ಯಾಲಯಗಳ ಶಿಕ್ಷಣದ ಗುಣಮಟ್ಟ, ಭ್ರಷ್ಟಾಚಾರದ ಆರೋಪ, ದುರ್ಬಲ ಆಡಳಿತ ಮತ್ತು ಸಿಬ್ಬಂದಿ ಕೊರತೆ ಬಗ್ಗೆ ಕೇಳಿದ ಸದಸ್ಯರ ಪ್ರಶ್ನೆಗಳಿಗೆ ಉತ್ತರಿಸಿದ ಅವರು, ವಿಶ್ವವಿದ್ಯಾಲಯಗಳ ಭ್ರಷ್ಟ ಆಡಳಿತಕ್ಕೆ ಸದನದಲ್ಲಿ ಉತ್ತರ ಕೊಡಬೇಕಾದ ಸ್ಥಿತಿ ನಿರ್ಮಾಣವಾಗಿದೆ. ವಿಶ್ವವಿದ್ಯಾಲಯಗಳ ಸುಧಾರಣೆಗೆ ಕ್ರಮ ಕೈಗೊಂಡಿದ್ದು, ಎಲ್ಲರೂ ಪಕ್ಷಭೇದ ಮರೆತು ಕೈಜೋಡಿಸಬೇಕೆಂದರು.

ಮೂರು ವಿಶ್ವವಿದ್ಯಾಲಯಗಳ ವಿರುದ್ಧ ಬಂದಿರುವ ಆರೋಪಗಳ ತನಿಖೆಗೆ ಸರ್ಕಾರ ಸಮಿತಿಗಳನ್ನು ರಚಿಸಿದೆ. ಅಂಕಪಟ್ಟಿ ಮುದ್ರಣವನ್ನು ನಿಷೇಧಿಸಿದ್ದರೂ ಒಂದು ವಿಶ್ವವಿದ್ಯಾಲ ಯವು ಅಂಕಪಟ್ಟಿ ಮುದ್ರಣಕ್ಕೆ 11 ಕೋಟಿ ರೂ. ಖರ್ಚು ಮಾಡಿದೆ. ಆದೇಶದ ಪ್ರಕಾರ ದಾಖಲೆಗಳನ್ನು ಎನ್‌ಎಡಿ ಮತ್ತು ಡಿಜಿಲಾಕರ್ ಮೂಲಕ ನೀಡಬೇಕು. ವಿದೇಶದಲ್ಲಿ ಉನ್ನತ ವಿದ್ಯಾಭ್ಯಾಸಕ್ಕೆ ಅಗತ್ಯವಿದ್ದಲ್ಲಿ ಮಾತ್ರ ಕನಿಷ್ಟ ಭದ್ರತಾ ವೈಶಿಷ್ಟ್ಯಗಳೊಂದಿಗೆ ಪ್ರಮಾಣ ಪತ್ರಗಳನ್ನು ಮುದ್ರಿಸಲು ಅವಕಾಶ ಇದೆ ಎಂದು ಹೇಳಿದರು.

ಎಸ್‌ಎಸ್‌ಇಗೆ ಸಮಿತಿ

ರಾಜ್ಯದ ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಸಿಬ್ಬಂದಿ ಆಯ್ಕೆ ಪರೀಕ್ಷೆಗಳನ್ನು (ಎಸ್‌ಎಸ್‌ಇ) ಬರೆಯಲು ಸಹಾಯವಾಗುವಂತೆ ರಾಜ್ಯ ಉನ್ನತ ಶಿಕ್ಷಣ ಇಲಾಖೆ ಸಮಿತಿ ರಚಿಸಿದೆ. ಈ ಸಮಿತಿಗೆ ತಿಮ್ಮೇಗೌಡ ಅಧ್ಯಕ್ಷರಾಗಿದ್ದಾರೆಂದು ಮಾಹಿತಿ ನೀಡಿದರು.

## ಬ್ಯಾಟಿಂಗ್ ರ್ಯಾಂಕಿಂಗ್: ಹರ್ಮನ್‌ಪ್ರೀತ್ ಕೌರ್‌ಗೆ 7ನೇ ಸ್ಥಾನ

• ಪ್ರಜೋದಯ ವರದಿ

**ದುಬೈ:** ಭಾರತ ತಂಡದ ನಾಯಕಿ ಹರ್ಮನ್‌ಪ್ರೀತ್ ಕೌರ್ ಅವರು ಮಂಗಳವಾರ ಬಿಡುಗಡೆಯಾದ ಐಸಿಸಿ ಮಹಿಳಾ ಏಕದಿನ ಬ್ಯಾಟಿಂಗ್ ರ್ಯಾಂಕಿಂಗ್‌ನಲ್ಲಿ ಏಳನೇ ಸ್ಥಾನಕ್ಕೆ ಏರಿಕ್ಕೇರಿದ್ದಾರೆ. ಉಪನಾಯಕಿ ಸ್ಮೃತಿ ಮಂದಾನ ಅಗ್ರಸ್ಥಾನ ಕಾಯ್ದುಕೊಂಡಿದ್ದಾರೆ.

ಎಂಟನೇ ಸ್ಥಾನದಲ್ಲಿದ್ದ ಹರ್ಮನ್ ಅವರು ಒಂದು ಸ್ಥಾನ ಬಡ್ತಿ ಪಡೆದಿದ್ದಾರೆ. ನ್ಯೂಜಿಲೆಂಡ್‌ನ ಸೋಫಿ ಡಿವೈನ್ ಎರಡು ಸ್ಥಾನ ಕುಸಿತ ಕಂಡು ಒಂಬತ್ತನೇ ಸ್ಥಾನದಲ್ಲಿದ್ದಾರೆ. ಜೆಮಿಮಾ ರಾಡ್ರಿಗಸ್ ಅವರು 12ನೇ ಸ್ಥಾನದಲ್ಲಿ ಮುಂದುವರಿದಿದ್ದಾರೆ.

ಜಿಂಬಾಬ್ವೆ ವಿರುದ್ಧದ ಪಂದ್ಯದಲ್ಲಿ 94 ರನ್ ಬಾರಿಸಿದ ನ್ಯೂಜಿಲೆಂಡ್‌ನ ಬ್ಯಾಟರ್ ಮ್ಯಾಡಿ ಗ್ರೀನ್ ಅವರು ಐದು ಸ್ಥಾನಗಳ ಬಡ್ತಿಯೊಂದಿಗೆ 17ನೇ ಸ್ಥಾನಕ್ಕೇರಿದ್ದಾರೆ. ಜಿಂಬಾಬ್ವೆ ವಿರುದ್ಧದ 3 ಪಂದ್ಯಗಳ ಸರಣಿಯನ್ನು ಕಿವೀಸ್ 3-0ಯಿಂದ ಕೈವಶಮಾಡಿಕೊಂಡಿದೆ. ಸರಣಿಯಲ್ಲಿ ಆಲ್‌ರೌಂಡ್ ಪ್ರದರ್ಶನದ ಮೂಲಕ ಸರಣಿಯ ಆಟಗಾರ್ತಿ ಗೌರವಕ್ಕೆ ಪಾತ್ರವಾದ




ಅಮೆಲಿಯಾ ಕೆರ್ ಅವರು ಬ್ಯಾಟಿಂಗ್ ರ್ಯಾಂಕಿಂಗ್‌ನಲ್ಲಿ 2 ಸ್ಥಾನಗಳ ಬಡ್ತಿಯೊಂದಿಗೆ 19ನೇ ಸ್ಥಾನ ಗಳಿಸಿದ್ದಾರೆ.

ಟಿ-20 ರ್ಯಾಂಕಿಂಗ್‌ನಲ್ಲಿ ಅಮೆಲಿಯಾ ವೃತ್ತಿಜೀವನದ ಅತ್ಯುತ್ತಮ 694 ರೇಟಿಂಗ್ ಅಂಕ ಗಳನ್ನು ಗಳಿಸಿದ್ದಾರೆ. ದಕ್ಷಿಣ ಆಫ್ರಿಕಾ ವಿರುದ್ಧದ ಮೊದಲ ಪಂದ್ಯದಲ್ಲಿ 44 ಎಸೆತಗಳಲ್ಲಿ 78 ರನ್ ಗಳಿಸಿದ್ದರು. ಬ್ಯಾಟಿಂಗ್‌ನಲ್ಲಿ 8ನೇ ಮತ್ತು ಬೌಲಿಂಗ್‌ನಲ್ಲಿ 12ನೇ ಸ್ಥಾನವನ್ನು ಉಳಿಸಿಕೊಂಡಿದ್ದಾರೆ.

## ಮಹಿಳೆಯರಿಗೆ ಪುರುಷರಷ್ಟೇ ಅವಕಾಶ ಸಿಗಬೇಕು

• ಪ್ರಜೋದಯ ವರದಿ

**ಗಂಡಸಿ:** ಕೌಟುಂಬಿಕ ವ್ಯವಸ್ಥೆ ನಿರ್ವಹಣೆಯಲ್ಲಿ ಮಹಿಳೆಯರ ಪಾತ್ರ ಅತ್ಯಧಿಕವಾಗಿದ್ದು, ಅವರನ್ನು ಅಡುಗೆ ಮನೆಗೆ ಸೀಮಿತಗೊಳಿಸದೆ ಸಮಾನವಾಗಿ ಕಾಣಬೇಕೆಂದು ನಿವೃತ್ತ ಪ್ರಾಂಶುಪಾಲ ಡಿ.ಟಿ.ರಂಗಸ್ವಾಮಿ ಅವರು ಸಲಹೆ ನೀಡಿದರು.


ಅರಸೀಕೆರೆ ತಾಲ್ಲೂಕಿನ ಗಂಡಸಿ ಶ್ರೀ ಶಂಭುಲಿಂಗೇಶ್ವರ ಮಹಿಳಾ ಪದವಿ ಪೂರ್ವ ಕಾಲೇಜಿನ 1990ನೇ ಸಾಲಿನ ವಿದ್ಯಾರ್ಥಿನಿಯರು ಏರ್ಪಡಿಸಿದ್ದ ಗುರುವಂದನಾ ಮತ್ತು ಹಿರಿಯ ವಿದ್ಯಾರ್ಥಿನಿಯರ ಸ್ನೇಹ ಮಿಲನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಮಹಿಳೆಯರನ್ನು ಹುರಿದುಂಬಿಸುವ ಮೂಲಕ ಪುರುಷ-ಮಹಿಳೆ ಎಂಬ ಭೇದವಿಲ್ಲದೆ ಉತ್ತೇಜಿಸಬೇಕು. ಶ್ರೀ ಶಂಭುಲಿಂಗೇಶ್ವರ ಪದವಿ ಪೂರ್ವ ಮಹಿಳಾ ಕಾಲೇಜು 1990ರಲ್ಲಿ ಪ್ರಾರಂಭವಾದಾಗ ಪ್ರಾಂಶುಪಾಲನಾಗಿ ನಾನು ಸೇವೆ ಆರಂಭಿಸಿದೆ. ದಾಖಲಾಗಿದ್ದ 60 ವಿದ್ಯಾರ್ಥಿನಿಯರು ಉತ್ತಮ ವ್ಯಾಸಂಗದೊಂದಿಗೆ ಶಿಕ್ಷಣ ಇಲಾಖೆಯಲ್ಲಿ ಕೆಲಸ ಗಿಟ್ಟಿಸಿಕೊಳ್ಳುವ ಮೂಲಕ ಬದುಕು ಕಟ್ಟಿ ಕೊಂಡಿರುವುದು ವೃತ್ತಿಗೆ ಸಾರ್ಥಕತೆ ತಂದಿದೆ ಯೆಂದರು.

ರಾಷ್ಟ್ರ ನಿರ್ಮಾಣದಲ್ಲಿ ಯುವಕರ ಪಾತ್ರ ಹೆಚ್ಚಿರುತ್ತದೆ. ಯುವಕ-ಯುವತಿಯರು ಆ ನಿಟ್ಟಿನಲ್ಲಿ ಯೋಚಿಸಬೇಕು. ಶಿಕ್ಷಣದ ಜೊತೆಗೆ ನಮ್ಮ ಸಂಸ್ಕೃತಿ, ಸಂಪ್ರದಾಯ, ಪ್ರೀತಿ, ಗೌರವ, ಪ್ರಾಮಾಣಿಕತೆ, ಪರಿಸರ ಕಾಳಜಿ ಬೆಳೆಸಿಕೊಳ್ಳಬೇಕೆಂದರು.

ಶ್ರೀ ಶಂಭುಲಿಂಗೇಶ್ವರ ಕಾಲೇಜಿನಲ್ಲಿ ಸೇವೆ ಸಲ್ಲಿಸಿದ ನಿವೃತ್ತ ಪ್ರಾಂಶುಪಾಲ ಡಿ.ಟಿ. ರಂಗಸ್ವಾಮಿ, ಜಿ.ರವೀಶ್, ನಿವೃತ್ತ ಉಪನ್ಯಾಸಕ ಮಲ್ಲಿಕಾರ್ಜುನ ಸ್ವಾಮಿ ಅವರನ್ನು ಸನ್ಮಾನಿಸ ಲಾಯಿತು. ವಿದ್ಯಾರ್ಥಿನಿಯರಾದ ಜಿ.ವಿ.ಸುಜಾತ, ಸಿ.ಎನ್.ಶೋಭಾ ಹಾಜರಿದ್ದರು.



## ಏಷ್ಯನ್ ಚಾಂಪಿಯನ್‌ಷಿಪ್: ಅಂತಿಮ್‌ಗೆ ಮೀನಾಕ್ಷಿ ಆಘಾತ




• ಪ್ರಜೋದಯ ವರದಿ

**ನವದೆಹಲಿ:** ಕುಸ್ತಿ ತಾರೆ ಮೀನಾಕ್ಷಿ ಗೋಯತ್ ಅವರು ಎರಡು ಬಾರಿಯ ವಿಶ್ವ ಚಾಂಪಿಯನ್‌ಷಿಪ್ ಪದಕ ವಿಜೇತೆ ಅಂತಿಮ್ ಪಂಘಲ್ ಅವರಿಗೆ ಆಘಾತ ನೀಡಿದರು. ಇದರೊಂದಿಗೆ ಏಷ್ಯನ್ ಚಾಂಪಿಯನ್‌ಷಿಪ್‌ನಲ್ಲಿ ಸ್ಪರ್ಧಿಸುವ ಭಾರತ ತಂಡದಲ್ಲಿ ಸ್ಥಾನ ಗಿಟ್ಟಿಸಿಕೊಂಡರು.

ಏಷ್ಯನ್ ಚಾಂಪಿಯನ್‌ಷಿಪ್ ಏಪ್ರಿಲ್ 6ರಿಂದ 11ರ ವರೆಗೆ ಕಿರ್ಗಿಸ್ತಾನದ ಬಿಷ್ಕೆಕ್‌ನಲ್ಲಿ ನಡೆಯಲಿವೆ. ರಾಷ್ಟ್ರೀಯ ತಂಡದ ಆಯ್ಕೆಗಾಗಿ ನಡೆದ ಟ್ರಯಲ್ಸ್‌ನಲ್ಲಿ ಮೀನಾಕ್ಷಿ 6-2ರಿಂದ ಅನುಭವಿ ಅಂತಿಮ್ ಅವರಿಗೆ ಸೋಲುಣಿಸಿದರು.

ಈ ಹಿಂದೆ ಅಂತಿಮ್ ವಿರುದ್ಧ ಮೂರು ಬಾರಿ ಟ್ರಯಲ್ಸ್‌ನಲ್ಲಿ ಸೋತಿದ್ದ 25 ವರ್ಷದ ಮೀನಾಕ್ಷಿ, ರಕ್ಷಣಾತ್ಮಕ ಆಟದೊಂದಿಗೆ ಗೆದ್ದು ಬೀಗಿದರು. ವಿನೇಶ್ ಫೋಗಟ್ ಅವರ ಬಳಿಕ 53 ಕೆಜಿ ತೂಕದ ವಿಭಾಗದಲ್ಲಿ ಪಾರಮ್ಯ ಸಾಧಿಸಿದ್ದ ಅಂತಿಮ್ ಮುಖಭಂಗ ಅನುಭವಿಸಿದರು.

ಎರಡು ಬಾರಿಯ ರಾಷ್ಟ್ರೀಯ ಚಾಂಪಿಯನ್ ಆಗಿರುವ ಮೀನಾಕ್ಷಿ ಅವರು ರಾಷ್ಟ್ರೀಯ ಮಾಜಿ ಕೋಚ್ ಕುಲದೀಪ್ ಮಲಿಕ್ ಅವರ ಮಾರ್ಗದರ್ಶನದಲ್ಲಿ ಸೋನಿಪತ್‌ನಲ್ಲಿ ತರಬೇತಿ ಪಡೆಯುತ್ತಿದ್ದಾರೆ. ಅವರು 50 ಕೆ.ಜಿ ವಿಭಾಗದಲ್ಲಿ ಹಲವಾರು ಬಾರಿ ಸ್ಪರ್ಧಿಸಿದ್ದಾರೆ. ಆದರೆ ಈಗ 53 ಕೆ.ಜಿ ವಿಭಾಗಕ್ಕೆ ಹೊಂದಿಕೊಂಡಿದ್ದಾರೆ.

ಟ್ರಯಲ್ಸ್ ಗೆದ್ದಿರುವುದು ಖುಷಿ ತಂದಿದೆ. ನಾನು ಈ ಕ್ಷಣವನ್ನು ಆನಂದಿಸುತ್ತಿದ್ದೇನೆ. ನನ್ನ ಸಾಮರ್ಥ್ಯದ ಬಗ್ಗೆ ಇದ್ದ ಅನುಮಾನಗಳು ದೂರವಾಯಿತು ಎಂದು ಪಂದ್ಯದ ಬಳಿಕ ಮೀನಾಕ್ಷಿ ಪ್ರತಿಕ್ರಿಯಿಸಿದರು.

ಅಂತಿಮ್ ಇದಕ್ಕೂ ಮುನ್ನ ಎರಡೂ ಪಂದ್ಯಗಳಲ್ಲಿ ರಿಯಾ ಮತ್ತು ಜೂಲಿ ವಿರುದ್ಧ ಒಂದೇ ಒಂದು ಅಂಕವನ್ನು ಬಿಟ್ಟುಕೊಡದೆ ಗೆಲುವು ಸಾಧಿಸಿದ್ದರು.

50 ಕೆ.ಜಿ ತೂಕ ವಿಭಾಗದಲ್ಲಿ ಭಾರತ ತಂಡದಲ್ಲಿ ಸ್ಥಾನ ಪಡೆದ ನೀಲಂ ಕೂಡ ಅದ್ಭುತ ಪ್ರದರ್ಶನ ನೀಡಿದರು. ಶಿವಾನಿ ಅವರನ್ನು 7-3ರಿಂದ ಮಣಿಸಿ ದಿನದ ಆರಂಭ ಮಾಡಿದ್ದ ನೀಲಂ, ಫೈನಲ್ ಸುತ್ತಿನಲ್ಲಿ ಪ್ರಿಯಾಂಶಿ ಅವರನ್ನು ತಾಂತ್ರಿಕ ಶ್ರೇಷ್ಠತೆಯ ಆಧಾರದಲ್ಲಿ ಮಣಿಸಿದರು.

ಮಾನ್ಸಿ ಅಹ್ಲಾವತ್ (62 ಕೆ.ಜಿ) ಮತ್ತು ಮನೀಷಾ ಭನ್ವಾಲಾ (57 ಕೆ.ಜಿ), ಹಂಶಿಕಾ (55 ಕೆ.ಜಿ), ನೇಹಾ ಸಾಂಗ್ವಾನ್ (59 ಕೆ.ಜಿ), ಮೋನಿಕಾ (65 ಕೆ.ಜಿ), ಮಾನ್ಸಿ ಲಾಥರ್ (68 ಕೆ.ಜಿ), ಹರ್ಷಿತಾ (72 ಕೆಜಿ) ಮತ್ತು ಕಾಜಲ್ (76 ಕೆಜಿ) ತಂಡದಲ್ಲಿ ಸ್ಥಾನ ಪಡೆದ ಇತರರು.

ಪುರುಷರ ತಂಡ: ಅಂಕುಶ್ (57 ಕೆ.ಜಿ), ಅಮನ್ ಸೆಹ್ರಾವತ್ (61 ಕೆ.ಜಿ), ಸುಜೀತ್ ಕಲ್ಕಲ್ (65 ಕೆ.ಜಿ), ಅಭಿಮನ್ಯು (70 ಕೆ.ಜಿ) ಜೈದೀಪ್ (74 ಕೆ.ಜಿ), ಸಂದೀಪ್ ಮಾನ್ (79 ಕೆ.ಜಿ), ಮುಕುಲ್ ದಹಿಯಾ (86 ಕೆ.ಜಿ), ಪುನೀತ್ ಕುಮಾರ್ (92 ಕೆ.ಜಿ), ವಿಕ್ಕಿ (97 ಕೆ.ಜಿ) ಮತ್ತು ದಿನೇಶ್ (125 ಕೆ.ಜಿ).

## ಕುಕ್ಕುಟೋದ್ಯಮಿಗಳ ರಕ್ಷಣಾ ಸಮಿತಿಯಲ್ಲಿ ನಮ್ಮನ್ನು ಪರಿಗಣಿಸಿ

» ಮೊದಲನೇ ಪುಟದಿಂದ

ಕೋಳಿ ಸಾಕಾಣಿಕೆ ವೆಚ್ಚ ದುಬಾರಿಯಾಗಿದ್ದು, ರೈತರಿಗೆ ನಷ್ಟವೇ ಹೆಚ್ಚಾಗಿದೆ. ಆದ್ದರಿಂದ ಗ್ರೋಯಿಂಗ್ ಶುಲ್ಕವನ್ನು 20 ರೂ.ಗೆ ನಿಗದಿ ಮಾಡಬೇಕೆಂದು ಆಗ್ರಹಿಸಲಾಗಿದೆ.

**ಸರ್ಕಾರದ ದಾರಿ ತಪ್ಪಿಸುವ ಕಂಪನಿಗಳು**

ರಾಷ್ಟ್ರೀಯ ಕಂಪನಿಗಳು ರೈತರ ಹೆಸರಿನಲ್ಲಿ ಕರ್ನಾಟಕ ಪೌಲ್ಟ್ರಿ ಫಾರ್ಮರ್ಸ್ ಅಂಡ್ ಬ್ರೀಡರ್ಸ್ ಅಸೋಸಿಯೇಷನ್ ಎಂಬ ಸಂಸ್ಥೆ ಸ್ಥಾಪಿಸಿ ರೈತರ ಹೆಸರಿನಲ್ಲಿ ತಪ್ಪು ಮಾಹಿತಿ ನೀಡುತ್ತಿವೆ. ಆ ಮೂಲಕ ಕಂಪನಿಗಳು ಉತ್ಪಾದಿಸುತ್ತಿರುವ ಹೈಬ್ರಿಡ್ ಕೋಳಿ ಮರಿಗಳ ದರವನ್ನು ನಾಲ್ಕು ಪಟ್ಟು ಅಂದರೆ ಒಂದು ಕೋಳಿ ಮರಿಗೆ 60 ರೂ. ನಿಗದಿಪಡಿಸಿ ರೈತರಿಗೆ ಮಾರಾಟ ಮಾಡುವ ಮೂಲಕ ಭಾರೀ ಮೋಸ ಎಸಗುತ್ತಿವೆ. ಇದರಿಂದ ನೈಜ ಕೋಳಿ ಸಾಕಣೆದಾರರು ಸಂಕಷ್ಟ ಅನುಭವಿಸುವಂತಾಗಿದೆ.

ರೈತರನ್ನು ನಷ್ಟಕ್ಕೆ ಸಿಲುಕಿಸಿ ಉದ್ಯಮದಿಂದ ದೂರ ಇಡುವ ಪ್ರಯತ್ನಗಳನ್ನು ಕಂಪನಿಗಳು ಮಾಡುತ್ತಿವೆ ಎನ್ನಲಾಗಿದೆ. ಈ ಕಂಪನಿಗಳು ಸ್ವತಂತ್ರವಾಗಿದ್ದು ಯಾವುದೇ ಇಲಾಖೆಯ ಅಧೀನದಲ್ಲಿ ಇರುವುದಿಲ್ಲ, ಅವರು ಮಾಡುವ ಕಾನೂನು ನಿರ್ಧಾರಗಳಿಂದ ರಾಜ್ಯದ ರೈತರಿಗೆ ಶೋಷಣೆ ಆಗುತ್ತಿದೆ. ಸ್ವಂತ ಕೋಳಿ ಸಾಕಾಣಿಕೆ ಮಾಡಲಾಗದೆ ಹಾಗು ಕಂಪನಿ ಜೊತೆ ಒಪ್ಪಂದ ಪದ್ಧತಿಯಲ್ಲಿ ಕೋಳಿ ಸಾಕಾಣಿಕೆ ಮಾಡುತ್ತಿರುವ ರೈತರಿಗೂ ಇದರಿಂದ ಭವಿಷ್ಯದ ದಿನಗಳಲ್ಲಿ ಆತಂಕ ತಪ್ಪಿದ್ದಲ್ಲವೆಂಬ ಸಂಶಯ ಶುರುವಾಗಿದೆ.

ಕೋಳಿ ಸಾಕಾಣಿಕೆ ರೈತರು ಮತ್ತು ಖಾಸಗಿ ಕಂಪನಿಗಳ ಜೊತೆ ಸರ್ಕಾರ ಕೈ ಜೋಡಿಸಿ ಬೆಲೆ ನಿಯಂತ್ರಣ, ಗುಣಮಟ್ಟದ ಕೋಳಿ ಮರಿ ಪೂರೈಕೆ, ಔಷಧಿ ವಿತರಣೆ ಪ್ರಕ್ರಿಯೆ ಮೇಲೆ ನಿಗಾ ಇಡಬೇಕು. ಸರ್ಕಾರ ಮಧ್ಯಸ್ಥಿಕೆ ವಹಿಸಿ ಕುಕ್ಕುಟ ನಿಯಂತ್ರಣ ಕಾಯ್ದೆ ಜಾರಿಗೆ ತರಬೇಕು. ಕೋಳಿ ಸಾಕಾಣಿ ಕೆಯನ್ನು ಕೃಷಿ ಚಟುವಟಿಕೆ ಎಂದು ಪರಿಗಣಿಸಿದರೂ ಕೃಷಿಗೆ ಸಿಗುವ ಸವಲತ್ತುಗಳು ಇನ್ನೂ ಸಿಗುತ್ತಿಲ್ಲ. ಕೋಳಿ ಸಾಕಾಣಿಕೆ ಚಟುವಟಿಕೆ ವಿಸ್ತರಿಸಲು ಹಾಗು ಶೇ. 4ರ ಬಡ್ಡಿ ದರದಲ್ಲಿ 25 ಲಕ್ಷ ರೂ. ವರೆಗೆ ಸಾಲ ಸೌಲಭ್ಯ ನೀಡಬೇಕು. ಕೆಎಂಎಫ್ ಮಾದರಿಯಲ್ಲಿ ಸರ್ಕಾರದಿಂದ ಕೋಳಿ ಸಾಕಾಣಿಕೆ ರೈತರಿಗೆ ಸಹಾಯಧನ ನೀಡಬೇಕು. ರಾಜ್ಯದಲ್ಲಿ ಕಬ್ಬು ಬೆಳೆಗಾರರಿಗೆ ಬೆಲೆಯನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರ ನಿಗದಿಪಡಿಸಿದಂತೆ ಕೋಳಿ ಸಾಕಣೆದಾರರಿಗೂ ಬೆಲೆ ನಿಗದಿ ಪಡಿಸಬೇಕೆಂದು ಒತ್ತಾಯಿಸಲಾಗಿದೆ.

## ಹೊಯ್ಸಳ ಸ್ಪೋರ್ಟ್ಸ್ ಅಕಾಡೆಮಿಯಲ್ಲಿ ರಕ್ತದಾನ ಶಿಬಿರ

• ಪ್ರಜೋದಯ ವರದಿ

**ಹಾಸನ:** ಚಲನಚಿತ್ರ ನಟ ದಿ||ಪುನೀತ್ ರಾಜಕುಮಾರ್ ಅವರ ಹುಟ್ಟು ಹಬ್ಬದ ಅಂಗವಾಗಿ ನಗರದ ಹೊಯ್ಸಳ ಸ್ಪೋರ್ಟ್ಸ್ ಅಕಾಡೆಮಿಯಲ್ಲಿ ಮಂಗಳವಾರ ರಕ್ತದಾನ ಶಿಬಿರ ಹಮ್ಮಿಕೊಳ್ಳಲಾಗಿತ್ತು. ಜೀವ ಸಂಜೀವಿನಿ ಬ್ಲಡ್ ಬ್ಯಾಂಕ್ ವತಿಯಿಂದ ಹಮ್ಮಿಕೊಂಡಿದ್ದ ಶಿಬಿರದಲ್ಲಿ ಕ್ರೀಡಾಪಟುಗಳು ಹಾಗು ಸಾರ್ವಜನಿಕರು ರಕ್ತದಾನ ಮಾಡಿದರು.

ಸ್ಪೋರ್ಟ್ಸ್ ಅಕಾಡೆಮಿಯ ಎಸ್.ಕೆ.ವೇಣುಗೋಪಾಲ್ ಅವರು ಮಾತನಾಡಿ, ಕನ್ನಡ ಚಿತ್ರ ರಂಗದಲ್ಲಿ ಪುನೀತ್ ರಾಜಕುಮಾರ್ ಅಚ್ಚಳಿಯದ ಛಾಪು ಮೂಡಿಸಿದ್ದಾರೆ. ಅವರು



ಬದುಕಿದ ದಿನಗಳು ಕಡಿಮೆಯಾದರೂ ಮಾಡಿದ ಕೆಲಸಗಳು ಅಪಾರ. ಸಮಾಜಕ್ಕೆ ಅತ್ಯುತ್ತಮ ಸಂದೇಶ ಸಾರಿ ಮಾದರಿಯಾಗಿದ್ದಾರೆ. ಅವರ ಸಮಾಜಮುಖಿ ಕೆಲಸಗಳನ್ನು ನಾವೂ ಮುಂದುವರಿಸುವ ಸಲುವಾಗಿ ರಕ್ತದಾನ ಶಿಬಿರ ಏರ್ಪಡಿಸಿದ್ದೇವೆಂದರು.

## ಇರಾನ್ ಪ್ರತೀಕಾರ ದಿಗ್ಭ್ರಮೆಗೊಳಿಸಿದೆ: ಟ್ರಂಪ್

• ಪ್ರಜೋದಯ ವರದಿ

**ವಾಷಿಂಗ್ಟನ್:** ತನ್ನ ಮೇಲಿನ ದಾಳಿಗೆ ಇರಾನ್ ಈ ರೀತಿಯಾಗಿ ಪ್ರತಿಕ್ರಿಯಿಸಬಹುದೆಂದು ನಾವು ನಿರೀಕ್ಷಿಸಿರಲಿಲ್ಲ ಎಂದು ಅಮೇರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಒಪ್ಪಿಕೊಂಡಿದ್ದಾರೆ.

ಸಂಘರ್ಷದ ಬಗ್ಗೆ ಸುದ್ದಿಗಾರರೊಂದಿಗೆ ಮಾತನಾಡಿದ ಟ್ರಂಪ್, ಇದನ್ನು ಯಾರೂ ನಿರೀಕ್ಷಿಸಿರಲಿಲ್ಲ. ನಾವು ದಿಗ್ಭ್ರಮೆಗೊಂಡಿದ್ದೇವೆ. ಇರಾನ್‌ನ ಪ್ರತೀಕಾರದ ತೀವ್ರತೆಯು ನಮಗೆ ಅಚ್ಚರಿ ಮೂಡಿಸಿದೆ. ವಿಶೇಷವಾಗಿ ಕತಾರ್, ಸೌದಿ ಅರೇಬಿಯಾ, ಯುಎಇ, ಬಹ್ರೇನ್, ಕುವೈತ್ ಮೇಲೆ ಇರಾನ್ ದಾಳಿ ನಡೆಸುತ್ತದೆಂದು ನಿರೀಕ್ಷಿಸಿರಲಿಲ್ಲ ಎಂದು ಹೇಳಿದ್ದಾರೆ.

ತನ್ನ ನೆರೆಯ ರಾಷ್ಟ್ರಗಳ ಮೇಲೆ ಇರಾನ್ ದಾಳಿ ಮಾಡಬಾರದಿತ್ತು. ಇರಾನ್ ಗುರಿಯಾಗಿಸಿದ ಕೆಲವು ಕ್ಷಿಪಣಿಗಳು ಇತರೆ ಕೊಲ್ಲಿ ರಾಷ್ಟ್ರಗಳ ಮೇಲೆ ಅಪ್ಪಳಿಸಿವೆಂದು ವಿವರಿಸಿದ್ದಾರೆ. ಅದಾಗ್ಯೂ, ಇರಾನ್ ಮೇಲೆ ದಾಳಿ ನಡೆಸುವ ಅಮೇರಿಕದ ನಿರ್ಧಾರವನ್ನು ಟ್ರಂಪ್ ಸಮರ್ಥಿಸಿಕೊಂಡಿದ್ದಾರೆ.

ಅಮೇರಿಕದ ದಾಳಿಯು ಇರಾನ್‌ನ ಸೇನಾ ಸಾಮರ್ಥ್ಯಗಳನ್ನು ಸೀಮಿತಗೊಳಿಸಲು ಸಹಾಯ ಮಾಡಿದೆ ಮತ್ತು ಕೊಲ್ಲಿ ರಾಷ್ಟ್ರಗಳಿಗೆ ಎದುರಾಗಿದ್ದ ಬೆದರಿಕೆಯನ್ನು ಕಡಿಮೆ ಮಾಡಿದೆ ಎಂದು ಅವರು ವಾದಿಸಿದ್ದಾರೆ. ಈ ವೇಳೆ ಕದನ ವಿರಾಮ ಸಾಧ್ಯತೆಗಳ ಬಗ್ಗೆ ಮಾತನಾಡಿದ ಟ್ರಂಪ್, ತಕ್ಷಣಕ್ಕೆ ಸಾಧ್ಯವಾಗದಿದ್ದರೂ ಶೀಘ್ರದಲ್ಲೇ ಯುದ್ಧ ಅಂತ್ಯವಾಗುತ್ತದೆಂದು ಹೇಳಿದ್ದಾರೆ.

## ಚರಂಡಿ ನಿರ್ಮಿಸದೆ ರಸ್ತೆ ಕಾಮಗಾರಿ: ಆಕ್ರೋಶ

• ಪ್ರಜೋದಯ ವರದಿ

**ಬೇಲೂರು:** ಪಟ್ಟಣದ ಹೊಸನಗರ ಬಡಾವಣೆಯಲ್ಲಿ ನಡೆಯುತ್ತಿರುವ ರಸ್ತೆಗೆ ಚರಂಡಿ ನಿರ್ಮಿಸದೆ ಕಾಮಗಾರಿ ನಡೆಸುತ್ತಿದ್ದಾರೆಂದು ನಿವಾಸಿ ಪಿ.ಹೆಚ್. ಸುಲೇಮಾನ್ ಅವರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

10-15 ವರ್ಷಗಳಿಂದ ಗುಂಡಿ ಬಿದ್ದಿರುವ ರಸ್ತೆ ಕಾಮಗಾರಿ ಈಗ ಕೈಗೆತ್ತಿಕೊಳ್ಳಲಾಗಿದೆ. ಈಗ ಎರಡನೇ ಬಾರಿ ಕಾಂಕ್ರೀಟ್ ರಸ್ತೆ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದೆ. ಆದರೆ, ಕಾಮಗಾರಿಯಲ್ಲಿ ತಾಂತ್ರಿಕ ಮಾನದಂಡ ಪಾಲಿಸುತ್ತಿಲ್ಲ. ರಸ್ತೆ ನಿರ್ಮಾಣಕ್ಕೂ ಮೊದಲು ಅಗತ್ಯವಾದ ಬಾಕ್ಸ್ ಚರಂಡಿ ನಿರ್ಮಿಸದೆ ನೇರವಾಗಿ ಕಾಂಕ್ರೀಟ್ ಹಾಕಲಾಗುತ್ತಿದೆ. ಅದರಿಂದ ಮಳೆಗಾಲದಲ್ಲಿ ನೀರು ಸರಿಯಾಗಿ ಹರಿಯದೆ ರಸ್ತೆಯ ಮೇಲೆ ನಿಂತು ಹೊಸದಾಗಿ ಹಾಕಿದ ಕಾಂಕ್ರೀಟ್ ಕೂಡ ಹಾಳಾಗುವ ಪರಿಸ್ಥಿತಿ ಇದೆ ಎಂದರು.



ರಸ್ತೆಗಳಿಗೆ ಸುಸಜ್ಜಿತ ಚರಂಡಿ ಬೇಕು. ಎರಡು ಬದಿಯಲ್ಲೂ ಬಾಕ್ಸ್ ಚರಂಡಿ ಇಲ್ಲದೇ ಮಾಡಿದ ಕಾಮಗಾರಿ ಪರಿಪೂರ್ಣವಾಗುವುದಿಲ್ಲ. ಈ ರೀತಿ ಮಾಡಿದರೆ ಎರಡು ವರ್ಷ ಕೂಡ ರಸ್ತೆ ಬಾಳಿಕೆ ಬರುವುದಿಲ್ಲ. ಪುರಸಭೆ ಇಂಜಿನೀಯರ್ ಮತ್ತು ಮುಖ್ಯಾಧಿಕಾರಿಗೆ ಹಲವು ಬಾರಿ ಮನವಿ ಮಾಡಿದರೂ ಪ್ರಯೋಜನವಾಗಿಲ್ಲವೆಂದರು.

ಆರು ಪಾರ್ಕ್‌ಗಳಿದ್ದರೂ ಒಂದನ್ನೂ ಅಭಿವೃದ್ಧಿಪಡಿಸಿಲ್ಲ. ಸಾವಿರಕ್ಕೂ ಹೆಚ್ಚು ಮನೆಗಳಿರುವ ಪ್ರದೇಶದಲ್ಲಿ ಜನರು ದಿನನಿತ್ಯ ಓಡಾಡುವ ದಾರಿಯೇ ದುಸ್ಥಿತಿಯಲ್ಲಿದೆ. ಇನ್ನೂ 30 ವರ್ಷ ಗಳಿಂದ ಒಂದೇ ಒಂದು ಉದ್ಯಾನವನವೂ ಸಮರ್ಪಕವಾಗಿ ಅಭಿವೃದ್ಧಿಪಡಿಸಿಲ್ಲ. ಜನರ ಜೀವನ ಮಟ್ಟ ಸುಧಾರಣೆಗೆ ಬೇಕಾದ ಯಾವುದೇ ಕ್ರಮ ಕೈಗೊಂಡಿಲ್ಲ. ಸಮಸ್ಯೆಗೆ ಪರಿಹಾರ ಕಲ್ಪಿಸದಿದ್ದರೆ ಪ್ರತಿಭಟನೆ ನಡೆಸುವುದಾಗಿ ಎಚ್ಚರಿಕೆ ನೀಡಿದರು.

## ಸವಾಲು ಎದುರಿಸುವ ಮನೋಬಲದಿಂದ ಉತ್ತಮ ಭವಿಷ್ಯ


### ಮನೋವೈದ್ಯೆ ಡಾ||ನಿರುಪಮಾ ಅಭಿಮತ

• ಪ್ರಜೋದಯ ವರದಿ

**ಹಾಸನ:** ಜೀವನದಲ್ಲಿ ಎದುರಾಗುವ ಸವಾಲುಗಳನ್ನು ಮಹಿಳೆ ಸಮರ್ಥವಾಗಿ ಎದುರಿಸುವ ಮನೋಬಲವನ್ನು ಬೆಳೆಸಿಕೊಂಡರೆ ಉತ್ತಮ ಭವಿಷ್ಯ ರೂಪಿಸಿಕೊಳ್ಳಬಹುದೆಂದು ಮನೋವೈದ್ಯರಾದ ಡಾ||ನಿರುಪಮಾ ಅವರು ಅಭಿಪ್ರಾಯಪಟ್ಟರು.

ನಗರದ ಎವಿಕೆ ಕಾಲೇಜು ಸಭಾಂಗಣದಲ್ಲಿ ಹಳೆಯ ವಿದ್ಯಾರ್ಥಿಗಳ ಸಂಘ ಮತ್ತು ಭಾರತ್ ಸೇವಾದಳದ ವತಿಯಿಂದ ಮಂಗಳವಾರ ಹಮ್ಮಿಕೊಂಡಿದ್ದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ನಡೆದ ಜಾಗೃತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಪ್ರತಿಯೊಬ್ಬರಲ್ಲೂ ದೇವರು ನೀಡಿದ ವಿಶಿಷ್ಟ ಪ್ರತಿಭೆ ಇದೆ. ಅದನ್ನು ಗುರುತಿಸಿ ಬೆಳೆಸಿಕೊಳ್ಳುವುದು ಮುಖ್ಯ ಎಂದು ಹೇಳಿದರು.

ಇಂದಿನ ವೇಗದ ಜೀವನಶೈಲಿ ಮತ್ತು ಸಾಮಾಜಿಕ ಒತ್ತಡಗಳ ನಡುವೆ ವಿದ್ಯಾರ್ಥಿಗಳ, ವಿಶೇಷವಾಗಿ ಹೆಣ್ಣು ಮಕ್ಕಳ ಮಾನಸಿಕ ಆರೋಗ್ಯದ ಬಗ್ಗೆ ಜಾಗೃತಿ ಅತ್ಯಗತ್ಯವಾಗಿದೆ. ಕುಟುಂಬದಲ್ಲಿ ಸಣ್ಣ ವಿಷಯಕ್ಕೂ ವಿರೋಧ ವ್ಯಕ್ತವಾದಾಗ ಕೆಲ ಯುವತಿಯರು



ಮನೋಸ್ಥೈರ್ಯ ಕಳೆದುಕೊಂಡು ತಮ್ಮ ಮೇಲೆ ತಾವೇ ಹಿಂಸೆ ಪಡುವ ಪ್ರವೃತ್ತಿಗೆ ಒಳಗಾಗುತ್ತಿದ್ದಾರೆ. ಇಂತಹ ನಡೆ, ವ್ಯಕ್ತಿತ್ವದ ದೌರ್ಬಲ್ಯ ಸೂಚಿಸಿದರೂ, ಅದನ್ನು ಅರಿತು ಸರಿಯಾದ ಮಾರ್ಗದರ್ಶನ ನೀಡುವುದರಿಂದ ಅವರ ಜೀವನವನ್ನು ಸುಧಾರಿಸಬಹುದೆಂದು ಹೇಳಿದರು.

ಪ್ರಾಂಶುಪಾಲ ಡಾ.ಸೀ.ಚ. ಯತೀಶ್ವರ್ ಅವರು ಮಾತನಾಡಿ, ಸ್ವಾಭಿಮಾನ ಮತ್ತು ವೈಚಾರಿಕತೆ ಇಲ್ಲದೆ ವ್ಯಕ್ತಿಯೂ, ಸಮಾಜವೂ ಪ್ರಗತಿ ಸಾಧಿಸಲು ಸಾಧ್ಯವಿಲ್ಲ. ಹೆಣ್ಣುಮಕ್ಕಳು ಕೇವಲ ಪಾಠ ಪುಸ್ತಕಗಳ ಲ್ಲದೇ, ಜೀವನ ಮೌಲ್ಯಗಳನ್ನೂ ಅರಿತುಕೊಳ್ಳಬೇಕು. ವೈಜ್ಞಾನಿಕ ಮನೋಭಾವ ಬೆಳೆಸಿಕೊಳ್ಳುವುದು ಇಂದಿನ ಕಾಲಘಟ್ಟದ ಅಗತ್ಯವಾಗಿದೆ ಎಂದು ತಿಳಿಸಿದರು.

ಮೌಢ್ಯತೆ ಮತ್ತು ಅನವಶ್ಯಕ ನಂಬಿಕೆಗಳಿಗೆ ಬಲಿಯಾಗದೇ, ತಾರ್ಕಿಕ ಚಿಂತನೆ ಬೆಳೆಸಿಕೊಳ್ಳುವ ಮೂಲಕ ಸಮಾಜದಲ್ಲಿ ಅರ್ಥಪೂರ್ಣ ಬದಲಾವಣೆ ತರಬಹುದು. ದೈಹಿಕ ಆರೋಗ್ಯದಂತೆ ಮಾನಸಿಕ ಆರೋಗ್ಯಕ್ಕೂ ಸಮಾನ ಮಹತ್ವ ನೀಡಬೇಕು. ಇಂದಿನ ವಿದ್ಯಾರ್ಥಿ ಸಮುದಾಯ ಮೊಬೈಲ್ ಫೋನ್‌ಗಳ ಅತಿಯಾದ ಬಳಕೆಯಿಂದ ತಮ್ಮ ಅಮೂಲ್ಯ ಸಮಯವನ್ನು ಸಾಮಾಜಿಕ ಜಾಲ ತಾಣಗಳಲ್ಲಿ ಕಳೆಯುತ್ತಿದ್ದು, ಅದು ಅವರ ಮನಸ್ಸಿನ ಮೇಲೆ ದುಷ್ಪರಿ ಣಾಮ ಬೀರುತ್ತಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಇನ್‌ಸ್ಟಾಗ್ರಾಮ್, ಫೇಸ್‌ಬುಕ್, ವಾಟ್ಸ್‌ಆ್ಯಪ್ ಸೇರಿ ವಿವಿಧ ಆ್ಯಪ್‌ಗಳ ಅತಿಯಾದ ಬಳಕೆ ವಿದ್ಯಾರ್ಥಿಗಳ ಏಕಾಗ್ರತೆ ಕುಗ್ಗಿಸಿ, ಒಂಟಿ ತನ ಹಾಗು ಆತಂಕಕ್ಕೆ ಕಾರಣವಾಗುತ್ತಿದೆ. ಈ ಗೀಳಿನಿಂದ ಹೊರಬಂದು ಸಮಯವನ್ನು ಸದುಪಯೋಗ ಪಡಿಸಿಕೊಂಡರೆ ಮಾತ್ರ ಸದೃಢ ಮತ್ತು ಜವಾಬ್ದಾರಿಯುತ ಸಮಾಜ ನಿರ್ಮಾಣ ಸಾಧ್ಯ. ಮಹಾತ್ಮ ಗಾಂಧೀಜಿ ಹೇಳಿದಂತೆ ಹೆಣ್ಣುಮಕ್ಕಳು ಶಿಕ್ಷಣ ಪಡೆದರೆ ಒಂದು ಶಾಲೆ ತೆರೆದಂತೆ ಎಂಬ ಮಾತು ನಿಜವಾಗಬೇಕಾದರೆ, ಅವರು ಮಾನಸಿಕವಾಗಿ ಬಲಿಷ್ಠರಾಗಬೇಕು. ಜೀವನದ ಸವಾಲುಗಳನ್ನು ಧೈರ್ಯದಿಂದ ಎದುರಿಸಿ ಸ್ವಾತಂತ್ರ್ಯ ಕಾಪಾಡಿಕೊಳ್ಳಬೇಕು. ಶಿಕ್ಷಣದ ಮೂಲಕ ಉತ್ತಮ ಪರಿಸರ ನಿರ್ಮಿಸಿ ಸಮಾಜದಲ್ಲಿ ಸಕಾರಾತ್ಮಕ ಬದಲಾವಣೆಗೆ ಕೈಜೋಡಿಸಬೇಕೆಂದರು.

ಹಳೆಯ ವಿದ್ಯಾರ್ಥಿನಿಯರ ಸಂಘದ ಅಧ್ಯಕ್ಷೆ ಎಸ್.ಹೆಚ್.ವಾರಿಜ, ಭಾರತ್ ಸೇವಾದಳ ವಲಯ ಸಂಘಟಕಿ ವಿ.ಎಸ್.ರಾಣಿ ಹಾಗೂ ಕಾಲೇಜಿನ ಬೋಧಕ ವೃಂದ, ವಿದ್ಯಾರ್ಥಿನಿಯರು ಇದ್ದರು.

## ಬೇಲೂರಿನಲ್ಲಿ ಹೆಣ್ಣು ಮಕ್ಕಳಿಗೆ ಹೆಚ್‌ಪಿವಿ ಲಸಿಕಾ ಅಭಿಯಾನ




• ಪ್ರಜೋದಯ ವರದಿ

**ಬೇಲೂರು:** ಗರ್ಭ ಕೊರಳ ಕ್ಯಾನ್ಸರ್ ತಡೆಗಟ್ಟುವ ಉದ್ದೇಶದಿಂದ ಪಟ್ಟಣದ ಸಾರ್ವಜನಿಕ ಸರ್ಕಾರಿ ಆಸ್ಪತ್ರೆಯಲ್ಲಿ ಮಂಗಳವಾರ ಹೆಚ್‌ಪಿವಿ ಲಸಿಕಾ ಅಭಿಯಾನ ಹಮ್ಮಿಕೊಳ್ಳಲಾಗಿತ್ತು.

ತಾಲ್ಲೂಕು ಆರೋಗ್ಯಾಧಿಕಾರಿ ಡಾ|| ವಿಜಯ್ ಅವರು ಮಾತನಾಡಿ, ಗರ್ಭಕೊರಳ ಕ್ಯಾನ್ಸರ್ ತಡೆಗಟ್ಟಲು ಹೆಚ್‌ಪಿವಿ ಲಸಿಕೆ ಸುರಕ್ಷಿತ ಹಾಗು ಪರಿಣಾಮಕಾರಿಯಾಗಿದೆ. ಕೇಂದ್ರ ಸರ್ಕಾರದ ಮಾರ್ಗಸೂಚಿಯಂತೆ 14 ರಿಂದ 15 ವರ್ಷದೊಳಗಿನ ಹೆಣ್ಣುಮಕ್ಕಳಿಗೆ ಸರ್ಕಾರಿ ಆರೋಗ್ಯ ಕೇಂದ್ರ, ಸಮುದಾಯ ಆರೋಗ್ಯ ಕೇಂದ್ರ ಹಾಗು ತಾಲ್ಲೂಕು ಆಸ್ಪತ್ರೆಗಳಲ್ಲಿ ಉಚಿತವಾಗಿ ಲಸಿಕೆ ನೀಡಲಾ ಗುತ್ತಿದೆ. ಲಸಿಕೆ ಪಡೆದವರಿಗೆ ಪ್ರಮಾಣ ಪತ್ರ ಸಹ ವಿತರಿಸಲಾಗುತ್ತಿದೆ. ಆದ್ದರಿಂದ ಸರ್ವಜನಿಕರು, ಪೋಷಕರು ಅಭಿಯಾನದ ಸದುಪಯೋಗ ಪಡೆಯಬೇಕೆಂದರು.

ಸಾರ್ವಜನಿಕ ಸರ್ಕಾರಿ ಆಸ್ಪತ್ರೆಯ ಸ್ತ್ರೀ ಮತ್ತು ಪ್ರಸೂತಿ ತಜ್ಞ ಡಾ|| ಸತೀಶ್, ತಾಲ್ಲೂಕು ಆರೋಗ್ಯ ಶಿಕ್ಷಣಾಧಿಕಾರಿ ಉಷಾ, ಆರೋಗ್ಯ ನಿರೀಕ್ಷಣಾಧಿಕಾರಿ ದಯಾನಂದ್, ವ್ಯವಸ್ಥಾಪಕ ಅಂಕಿತ್, ಹಿರಿಯ ಆರೋಗ್ಯ ಸುರಕ್ಷಾಧಿಕಾರಿ ಮಂಗಳಮ್ಮ, ಆಶಾ ಮೇಲ್ವಿಚಾರಕಿ ವಂದನ, ಹಿರಿಯ ಶುಶ್ರೂಷಣಾಧಿಕಾರಿ ಶಶಿಕಲಾ, ವನಿತಾ, ಮಣಿ, ಪ್ರತೀಕ್ಷಾ ಇತರರಿದ್ದರು.

## ಸಕಲೇಶಪುರ: ಎಸ್‌ಎಸ್‌ಎಲ್‌ಸಿ ಪರೀಕ್ಷೆಗೆ ಪೂರ್ವ ಸಿದ್ಧತೆ

• ಪ್ರಜೋದಯ ವರದಿ

**ಸಕಲೇಶಪುರ:** ತಾಲ್ಲೂಕಿನಲ್ಲಿ ನಡೆಯಲಿರುವ ಎಸ್‌ಎಸ್‌ಎಲ್‌ಸಿ ಪರೀಕ್ಷೆಗಳು ಸುಸೂತ್ರವಾಗಿ ನಡೆಯುವಂತೆ ಅಗತ್ಯ ಸಿದ್ಧತೆ ಕೈಗೊಳ್ಳಲಾಗಿದೆ ಎಂದು ಶಿಕ್ಷಣ ಇಲಾಖೆ ತಿಳಿಸಿದೆ.

ತಾಲ್ಲೂಕಿನಲ್ಲಿ 599 ಹುಡುಗರು, 604 ಹುಡುಗಿಯರು ಒಟ್ಟು 1,203 ವಿದ್ಯಾರ್ಥಿಗಳು ಈ ಬಾರಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಗೆ ಹಾಜರಾಗುತ್ತಿದ್ದಾರೆ. ವಿದ್ಯಾರ್ಥಿಗಳು ಉತ್ತಮ ತಯಾರಿ ಮಾಡಿಕೊಂಡಿದ್ದು, ಈಗಾಗಲೇ ಮೂರು ಹಂತಗಳಲ್ಲಿ ಪೂರ್ವಸಿದ್ಧತಾ ಪರೀಕ್ಷೆಗಳು ಯಶಸ್ವಿಯಾಗಿ ನಡೆಸಲಾಗಿದೆ. ಹಾಸನ ಜಿಲ್ಲೆ ಮೂರು ಪರೀಕ್ಷೆಗಳಲ್ಲೂ ಪ್ರಥಮ ಸ್ಥಾನದಲ್ಲಿದ್ದು, ಸಕಲೇಶಪುರ ತಾಲ್ಲೂಕು ಶೇ.97.5 ಫಲಿತಾಂಶ ಸಾಧಿಸಿರುವುದು ಗಮನಾರ್ಹವಾಗಿದೆ.

ಪ್ರಸ್ತುತ 1203 ವಿದ್ಯಾರ್ಥಿಗಳಲ್ಲಿ ಕೇವಲ 25 ಮಂದಿ ಮಾತ್ರ ಇನ್ನೂ ಸಂಪೂರ್ಣವಾಗಿ ಸಿದ್ಧರಾಗಿಲ್ಲವೆಂದು ತಿಳಿದುಬಂದಿದ್ದು, ಅವರನ್ನೂ ಉತ್ತೀರ್ಣರಾಗುವಂತೆ ಶಾಲಾ ಹಂತದಲ್ಲಿ ವಿಶೇಷ ತರಬೇತಿ ನೀಡಲಾಗಿದೆ. ತಾಲ್ಲೂಕಿನ ಒಂಬತ್ತು ಪರೀಕ್ಷಾ ಕೇಂದ್ರಗಳಲ್ಲಿ ಸಿಸಿಟಿವಿ ವ್ಯವಸ್ಥೆ ಹಾಗೂ ವೆಬ್‌ಕಾಸ್ಟಿಂಗ್ ಸೌಲಭ್ಯಗಳನ್ನು ಕಲ್ಪಿಸಲಾಗಿದ್ದು, ಪ್ರಯೋಗಾತ್ಮಕ ಪರಿಶೀಲನೆಗಳನ್ನು ಈಗಾಗಲೇ ನಡೆಸಲಾಗಿದೆ. ಎಲ್ಲಾ ಕ್ಯಾಮೆರಾಗಳು ಸಮರ್ಪಕವಾಗಿ ಕಾರ್ಯ ನಿರ್ವಹಿಸುತ್ತಿದ್ದು, ನಿರಂತರವಾಗಿ ಅವುಗಳನ್ನು




ಪರಿಶೀಲಿಸಲಾಗುತ್ತಿದೆ.

ಪರೀಕ್ಷಾ ಕೇಂದ್ರಗಳಲ್ಲಿ ಶುದ್ಧ ಕುಡಿಯುವ ನೀರು, ಸ್ವಚ್ಛ ಶೌಚಾಲಯ, ಸಮರ್ಪಕ ಪೀಠೋಪಕರಣ ಸೇರಿ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗಿದೆ. ವಿದ್ಯಾರ್ಥಿಗಳ ಪ್ರಯಾಣ ಸುಗಮವಾಗಲು ಕೆಎಸ್‌ಆರ್‌ಟಿಸಿ ಮೂಲಕ ಉಚಿತ ಪ್ರಯಾಣ ಸೌಲಭ್ಯ ಕಲ್ಪಿಸಲಾಗಿದ್ದು, ಪ್ರವೇಶಪತ್ರ ಪ್ರದರ್ಶನದೊಂದಿಗೆ ರಾಜ್ಯಾದ್ಯಂತ ಪ್ರಯಾಣಿಸಲು ಅವಕಾಶ ನೀಡಲಾಗಿದೆ. ಅರಣ್ಯ ಪ್ರದೇಶಗಳಿಂದ ವಿದ್ಯಾರ್ಥಿಗಳು ಸುಗಮವಾಗಿ ಪರೀಕ್ಷಾ ಕೇಂದ್ರಗಳಿಗೆ ಆಗಮಿಸಲು ಅರಣ್ಯ ಇಲಾಖೆಯ ಸಹಕಾರವನ್ನು ಪಡೆಯಲಾಗಿದೆ. ಸಂಬಂಧಿತ ಪ್ರದೇಶಗಳ ಮಾಹಿತಿ ನೀಡಲಾಗಿದ್ದು, ಅಗತ್ಯ ಕ್ರಮ ಕೈಗೊಳ್ಳಲಾಗಿದೆ.

ಆರೋಗ್ಯ ಇಲಾಖೆ ಸಹಕಾರದಿಂದ ಪರೀಕ್ಷಾ ಕೇಂದ್ರಗಳಲ್ಲಿ ಓಆರ್‌ಎಸ್ ಪೌಡರ್‌ಮೂಲಭೂತ ಔಷಧಿಗಳು ಹಾಗೂ ಅಗತ್ಯವಿದ್ದಲ್ಲಿ ಆರೋಗ್ಯ ಸಿಬ್ಬಂದಿಯನ್ನು ನಿಯೋಜಿಸಲು ಕ್ರಮ ಕೈಗೊಳ್ಳಲಾಗಿದೆ. ಪೊಲೀಸ್ ಇಲಾಖೆಯಿಂದ ಸೂಕ್ತ ಬಂದೋಬಸ್ತ್ ವ್ಯವಸ್ಥೆ ಕಲ್ಪಿಸಲಾಗಿದ್ದು, ಪರೀಕ್ಷಾ ಅವಧಿಯಲ್ಲಿ ಸಮೀಪದ ಜೆರಾಕ್ಸ್ ಅಂಗಡಿಗಳನ್ನು ಮುಚ್ಚುವಂತೆ ಸೂಚಿಸಲಾಗಿದೆ. ಅದರಿಂದ ಯಾವುದೇ ರೀತಿಯ ಅಕ್ರಮ ಚಟುವಟಿಕೆಗಳನ್ನು ತಡೆಗಟ್ಟುವ ಉದ್ದೇಶ ಹೊಂದಲಾಗಿದೆ.

ಪ್ರಶ್ನೆಪತ್ರಗಳನ್ನು ಈಗಾಗಲೇ ಜಿಲ್ಲಾ ಖಜಾನೆಯಲ್ಲಿ ಸುರಕ್ಷಿತವಾಗಿ ಸಂಗ್ರಹಿಸಲಾಗಿದೆ. ಒಟ್ಟಾರೆ ಪರೀಕ್ಷಾ ಪೂರ್ವ ಸಿದ್ಧತೆ ಸಮರ್ಪಕವಾಗಿ ಪೂರ್ಣಗೊಂಡಿದ್ದು, ಪರೀಕ್ಷೆಯನ್ನು ಯಶಸ್ವಿಯಾಗಿ ನಡೆಸಲಾಗುವುದೆಂದು ಅಧಿಕಾರಿಗಳು ತಿಳಿಸಿದ್ದಾರೆ.

## ಆಧುನಿಕ ಸೌದೆ ಒಲೆಯಲ್ಲಿ ಅಡುಗೆ ತಯಾರಿ

• ಪ್ರಜೋದಯ ವರದಿ

**ಬೇಲೂರು:** ಹೋಟೆಲ್ ಹಾಗೂ ಇತರೆ ಉದ್ಯಮಕ್ಕೆ ವಾಣಿಜ್ಯ ಸಿಲಿಂಡರ್ ಸಿಗದೆ ಪರದಾಡುತ್ತಿರುವ ಸಂದರ್ಭದಲ್ಲಿ ಅನಿಲ ಸಿಲಿಂಡರ್ ತೊಂದರೆಗೆ ತಲೆಕೆಡಿಸಿಕೊಳ್ಳದೆ ಬೇಲೂರು-ಹಾಸನ ರಸ್ತೆಯ ಹೀರೋ ಶೋರೂಮ್ ಮುಂಭಾಗದ ಅಡುಗೆ ಮನೆ ಕೈರುಚಿಯಲ್ಲಿ ಆಧುನಿಕ ಸೌದೆ ಒಲೆಯಲ್ಲಿ ಶುಚಿ ರುಚಿ ಅಡುಗೆ ತಯಾರಿಸಿ ಕೊಡುತ್ತಿರುವುದು ವಿಶೇಷವಾಗಿದೆ.

ಪಟ್ಟಣದ ಕೃಷಿ ಇಲಾಖೆ ಹಿಂಭಾಗವಿರುವ ಅಡುಗೆ ಮನೆ ಕೈ ರುಚಿ ಕಳೆದ ಒಂದು ವರ್ಷದ ಹಿಂದೆ ಆರಂಭವಾಗಿದ್ದು, ಅಂದಿನಿಂದಲೂ ಆಧುನಿಕ ಸೌದೆ ಒಲೆಗೆ ಹೆಚ್ಚಿನ ಪ್ರಾಮುಖ್ಯತೆ ನೀಡುತ್ತಾ ಬಂದಿರುತ್ತಾರೆ. ತಮ್ಮ ಹೋಟೆಲಿಗೆ ಬರುವ ಗ್ರಾಹಕರಿಗೆ ಸೌದೆ ಒಲೆಯಲ್ಲಿ ಅಡುಗೆ ಮಾಡಿ ಊಟ ಬಡಿಸುತ್ತಿದ್ದಾರೆ. ಕಳೆದ 30 ವರ್ಷಗಳಿಂದ ಮದುವೆ ಸೇರಿ ವಿವಿಧ ಶುಭ ಸಮಾರಂಭಗಳಿಗೆ ಅಡುಗೆ ಕಾಂಟ್ರಾಕ್ಟರ್ ಆಗಿ ಕೆಲಸ ನಿರ್ವಹಿಸುತ್ತಾ ಬಂದಿರುವ ರಾಘವೇಂದ್ರ ಭಾರದ್ವಾಜ್ ಹಾಗೂ ರವಿ ಅವರು ತಾಲ್ಲೂಕಿನಲ್ಲಿ ಮನೆ ಮಾತಾಗಿದ್ದಾರೆ. ಅನಿಲ ಸಿಲಿಂಡರ್ ನಲ್ಲಿ ಅಡುಗೆ ಮಾಡಿ ತಿನ್ನುವುದಕ್ಕಿಂತ ಸೌದೆ ಹೊಲಿಗೆಯಲ್ಲಿ ಮಾಡಿದ ಅಡುಗೆಯ ಕೈ ರುಚಿಯೇ ಬೇರೆ ಎಂಬುದು ಅವರ ಅಭಿಪ್ರಾಯವಾಗಿದೆ.

ರಾಘವೇಂದ್ರ ಭಾರದ್ವಾಜ್ ಮಾತನಾಡಿ,



ಆಧುನಿಕ ಸೌದೆ ಒಲೆಗಳು ಸಾಂಪ್ರದಾಯಿಕ ಒಲೆಗಳಿಗಿಂತ ಹೆಚ್ಚು ಪರಿಣಾಮಕಾರಿಯಾಗಿದ್ದು, ಕಡಿಮೆ ಸೌದೆಯನ್ನು ಬಳಸುತ್ತವೆ. ಹೊಗೆ ಯನ್ನು ಕಡಿಮೆ ಮಾಡುವುದರಿಂದ ಆರೋಗ್ಯ ಮತ್ತು ಪರಿಸರಕ್ಕೆ ಒಳ್ಳೆಯದು. ಅವುಗಳಲ್ಲಿ ಅಡುಗೆ ಬೇಗನೆ ಆಗುತ್ತದೆ, ಬೂದಿ ಕಡಿಮೆಯಾಗುತ್ತದೆ ಮತ್ತು ಉಷ್ಣತೆ ಹೆಚ್ಚು ಕಾಲ ಉಳಿಯುತ್ತದೆ. ಈ ಮೂಲಕ ಹಣ ಮತ್ತು ಸಮಯ ಎರಡನ್ನೂ ಉಳಿಸಲು ಸಹಕಾರಿ ಎನ್ನುತ್ತಾರೆ.

ಮಧ್ಯಪ್ರಾಚ್ಯದಲ್ಲಿನಡೆಯುತ್ತಿರುವ ಯುದ್ಧದಿಂದಾಗಿ ಸಿಲಿಂಡರ್ ಸಿಗದೇ ಹೋಟೆಲ್ ಮಾಲೀಕರು ಪರದಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. ತಾವು ಆರಂಭದಿಂದಲೂ ಸೌದೆ ಒಲೆ ಉಪಯೋಗಿಸುತ್ತಿರುವುದರಿಂದ ಅನಿಲ ಸಮಸ್ಯೆ ಉಂಟಾಗಿಲ್ಲ. ನಮ್ಮಲ್ಲಿ ಬಂದ ಗ್ರಾಹಕರಿಗೆ ಸಂತೃಪ್ತಿಯಾಗಿ ಊಟ ಹಾಗೂ ಉಪಹಾರ ನೀಡುತ್ತಿದ್ದೇವೆ. ಸೌದೆ ಒಲೆಯ ಬಗ್ಗೆ ಕೆಲವು ಹೋಟೆಲ್ ಮಾಲೀಕರು ಆಸಕ್ತರಾಗಿ ಮಾಹಿತಿ ಕೇಳುತ್ತಿದ್ದಾರೆಂದರು.

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019